# ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು

## ದಿನಾಂಕ 02–05–2012 ರಂದು ಬೆಳಿಗ್ಗೆ 11.30 ಗಂಟೆಗೆ ಪ್ರಾಧಿಕಾರದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳು

* * * *

**ವಿಷಯ ಸಂಖ್ಯೆ 01** ದಿನಾಂಕ 31–03–2012 ರಂದು ನಡೆದ ಪ್ರಾಧಿಕಾರದ ಸಾಮಾನ್ಯ ಸಭೆಯ ನಡೆವಳಿಗಳನ್ನು ಓದಿ ದಾಖಲಿಸುವ ಬಗ್ಗೆ.

**ಟಿಪ್ಪಣಿ** ದಿನಾಂಕ 31–03–2012 ರಂದು ನಡೆದ ಪ್ರಾಧಿಕಾರದ ಸಾಮಾನ್ಯ ಸಭೆಯ ಮುಂದೆ ಮಂಡಿಸಿದೆ.

**ಟಿಪ್ಪಣಿ** ದಿನಾಂಕ 31–03–2012 ರಂದು ನಡೆದ ಪ್ರಾಧಿಕಾರದ ಸಾಮಾನ್ಯ ಸಭೆಯ ನಡೆವಳಿಗಳನ್ನು ಓದಿ ದಾಖಲು ಮಾಡಲಾಯಿತು.

**ವಿಷಯ ಸಂಖ್ಯೆ 02** ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2012ನೇ ಸಾಲಿನ ಮಾರ್ಚ್ ಮಾಹೆಯ ಜಮಾ ಖರ್ಚು ಪಟ್ಟಿಯನ್ನು ಅನುಮೋದಿಸುವ ಬಗ್ಗೆ.

**ಟಿಪ್ಪಣಿ** ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2012ನೇ ಸಾಲಿನ ಮಾರ್ಚ್ ಮಾಹೆಯ ಜಮಾ ಖರ್ಚು ತಃಖ್ತೆ ಅನುಬಂಧ–1 ರಲ್ಲಿ ಲಗತ್ತಿಸಿ ಸಭೆಯ ಪರಿಶೀಲನೆಗೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2012ನೇ ಸಾಲಿನ ಮಾರ್ಚ್ ಮಾಹೆಯ ಜಮಾ ಖರ್ಚು ತಃಖ್ತೆ ಅನುಬಂಧ–1 ರಲ್ಲಿ ತೋರಿಸಿರುವಂತೆ ಜಮಾ ಖರ್ಚು ತಃಖ್ತೆಯನ್ನು ಸರ್ವಾನುಮತದಿಂದ ಸಭೆಯು ಅನುಮೋದಿಸಿತು.

**ವಿಷಯ ಸಂಖ್ಯೆ 03** ಈ ಸಂಜೆ ಪತ್ರಿಕೆಗೆ ಜಾಹಿರಾತು ನೀಡುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಸಿ.ಎಸ್.ಕುಮಾರ್, ಈ ಸಂಜೆ ಪತ್ರಿಕೆ ಜಿಲ್ಲಾ ವರದಿಗಾರ, ತುಮಕೂರು ಇವರು ಪ್ರಾಧಿಕಾರಕ್ಕೆ ದಿನಾಂಕ 23–04–2012 ರಂದು ಮನವಿ ಸಲ್ಲಿಸಿದ್ದು, ದಿನಾಂಕ 28–04–2012 ರಂದು ಸಿದ್ದಗಂಗಾ ಮಠದ ಡಾ॥ ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳ 105 ನೇ ಜನ್ಮ ದಿನೋತ್ಸವ ಆಚರಣೆ ಸಂಬಂಧ ಪ್ರಾಧಿಕಾರದ ವತಿಯಿಂದ ಈ ಸಂಜೆ ಪತ್ರಿಕೆಗೆ ವಿಶೇಷ ಪುರವಣಿಗೆ ಜಾಹಿರಾತು ನೀಡಬೇಕೆಂದು ಕೋರಿತ್ತಾರೆ. ಜಾಹಿರಾತು ಧರ ಈ ಕೆಳಕಂಡಂತೆ ಇರುತ್ತದೆ.

| | |
|---|---|
| ಕಾಲು ಪುಟ | ರೂ.14,000 |
| ಮುಖ ಪುಟ | ರೂ.38,000 |

ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಿದೆ.

**ತೀರ್ಮಾನ**

ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ಡಾ॥ ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳ 105 ನೇ ಜನ್ಮ ದಿನೋತ್ಸವ ಆಚರಣೆ ಸಂಬಂಧ ಈಗಾಗಲೇ ಮುಗಿದಿರುವುದರಿಂದ ಜಾಹಿರಾತು ನೀಡುವ ಅಗತ್ಯವಿಲ್ಲವೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 04**

ಮೇಳೇಕೋಟೆ – ವೀರಸಾಗರ ವಸತಿ ಬಡಾವಣೆಯ ಮೂಲೆ ನಿವೇಶನಗಳನ್ನು ಹರಾಜು ಮಾಡಿರುವ ಬಿಡ್ ಮೊಬಲಗುಗಳನ್ನು ಸ್ಥಿರೀಕರಣಗೊಳಿಸುವ ಬಗ್ಗೆ.

**ಟಿಪ್ಪಣಿ**

ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 11–04–2012 ರಂದು 31 ಮೂಲೆ ನಿವೇಶನಗಳನ್ನು ಬಹಿರಂಗ ಹರಾಜು ಸಂಬಂಧ ಈ ಕಛೇರಿಯ ಕ್ರಮಾಂಕ ಟಿಯುಡಿಎ/ಸೈಟ್ ಆಕ್ಷನ್/02/2011–12 ದಿನಾಂಕ 28–03–2012 ರಂತೆ ಈ ಕೆಳಕಂಡ ಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು.

1. ಪ್ರಜಾಪ್ರಗತಿ ಪತ್ರಿಕೆಯಲ್ಲಿ ಕಂಡ ದಿನಾಂಕ 05–04–2012
2. ಸೊಗಡು ಪತ್ರಿಕೆಯಲ್ಲಿ ಕಂಡ ದಿನಾಂಕ 05–04–2012
3. ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಕಂಡ ದಿನಾಂಕ 03–04–2012
4. ಪ್ರಜಾವಾಣಿ ಪತ್ರಿಕೆಯಲ್ಲಿ ಕಂಡ ದಿನಾಂಕ 03–04–2012

ದಿನಾಂಕ 11–04–2012 ರಂದು ನಡೆದ ಮೂಲೆ ನಿವೇಶನಗಳ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ. | ನಿವೇಶನ ಸಂಖ್ಯೆ | ವಿಸ್ತೀರ್ಣ ಚ.ಮೀ. | ಟೋಕನ್‌ದಾರರ ಹೆಸರು | ಬಿಡ್ ಮೊಬಲಗು |
|---|---|---|---|---|
| 1 | 48A | 93.37 | ಎಂ.ಎಂ.ಯೂನಸ್‌ಖಾನ್ | 763565 |
| 2 | 67A | 44.25 | ಜಿ.ಶಿವಕುಮಾರ್ | 342814 |
| 3 | 74A | 44.25 | ಎಸ್.ಕಾಳಸ್ವಾಮಿ | 383285 |
| 4 | 83A | 60.45 | ಜಿ.ಶಿವಕುಮಾರ್ | 507304 |
| 5 | 93A | 59.63 | ಮನ್ಸೂರ್ ಅಹಮ್ಮದ್ ಖಾನ್ | 429099 |
| 6 | 103A | 53.20 | ಪಿ.ಶಿವಶಂಕರಿ | 423698 |
| 7 | 124A | 40.24 | ಡಿ.ನರೇಂದ್ರಬಾಬು | 309563 |
| 8 | 135A | 75.00 | ಸುಧೀರ್‌ಕುಮಾರ್ | 613320 |
| 9 | 136A | 67.50 | ಆರ್.ನಾರಾಜಯ್ಯ | 581040 |

| | | | | |
|---|---|---|---|---|
| 10 | 147A | 41.25 | ಗುರುರಾಜ್‌ಸಿಂಗ್ | 319572 |
| 11 | 148A | 37.50 | ವೇದಾವತಿ | 282450 |
| 12 | 159A | 78.00 | ಸತೀಶ್ ಹೆಚ್. | 608478 |
| 13 | 160A | 76.50 | ಹನುಮಾನ್ ಸಾ | 592661 |
| 14 | 180A | 64.60 | ಉಮಾದೇವಿ | 517850 |
| 15 | 181A | 60.05 | ಇಮ್ರಾನ್ ಷರೀಫ್ | 465235 |
| 16 | 189A | 50.63 | ಬಿ.ಎಸ್.ವೆಂಕಟೇಶ್‌ಮೂರ್ತಿ | 384035 |

ಮೇಲ್ಕಂಡ ತಃಖ್ತೆಯಲ್ಲಿ ಕಂಡ ಕ್ರಮ ಸಂಖ್ಯೆ (1) ರ ನಿವೇಶನ ಬಿಡ್‌ದಾರರು ಬಿಡ್ ಮೊಬಲಗಿನ ಶೇಕಡ 25 ರ ಮೊಬಲಗನ್ನು ಪಾವತಿಸಿರುವುದಿಲ್ಲ. ಪ್ರಯುಕ್ತ ಸದರಿಯವರು ಟೋಕನ್ ಖರೀದಿ ಸಂಬಂಧ ಪಾವತಿಸಿದ್ದ ರೂ.5000 ಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಉಳಿದಂತೆ ಕ್ರಮ ಸಂಖ್ಯೆ (2) ರಿಂದ (16) ರವರೆಗಿನ ಮೂಲೆ ನಿವೇಶನಗಳ ಬಿಡ್‌ದಾರರು ನಿಯಮ 1991 ರ ನಿಯಮ 6(2)(ಬಿ) ರಂತೆ ಬಹಿರಂಗ ಹರಾಜಿನ ದಿನವೇ ಬಿಡ್ ಮೊತ್ತದ ಶೇಕಡ 25 ನ್ನು ಪಾವತಿಸಿರುತ್ತಾರೆ.

ಬಹಿರಂಗ ಹರಾಜಿನಲ್ಲಿ ಮೂಲೆ ನಿವೇಶನಗಳನ್ನು ಅಂತಿಮವಾಗಿ ಪಡೆದ ಬಿಡ್‌ದಾರರ ಸಂಬಂಧ ಮೊತ್ತ ಮತ್ತು ನಿವೇಶನವನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಮೂಲೆ ನಿವೇಶನಗಳ ಹಂಚಿಕೆ) ನಿಯಮಗಳು 1991 ನಿಯಮ 7 ರಂತೆ ಪ್ರಾಧಿಕಾರದ ಸಭೆಯಲ್ಲಿ ಸ್ಥಿರೀಕರಿಸಬೇಕಿರುತ್ತದೆ. ವಿಷಯವನ್ನು ಸ್ಥಿರೀಕರಣಕ್ಕಾಗಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಲಾಗಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ಮೆಳೇಕೋಟೆ – ವೀರಸಾಗರ ವಸತಿ ಬಡಾವಣೆಯ ಮೂಲೆ ನಿವೇಶನಗಳನ್ನು ಹರಾಜು ಮಾಡಿರುವ ಬಿಡ್ ಮೊಬಲಗುಗಳನ್ನು ಸ್ಥಿರೀಕರಣಗೊಳಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 05** ತುಮಕೂರು ನಗರದ ಬಡ್ಡಿಹಳ್ಳಿ ಗ್ರಾಮದ ಸರ್ವೆ ನಂಬರ್ 42/11 ರಲ್ಲಿ 0–39.25 ಗುಂಟೆ ಜಾಗಕ್ಕೆ ವಸತಿ ಉದ್ದೇಶಕ್ಕೆ ವಿಭಜಿತ ವಿನ್ಯಾಸ ನಕ್ಷೆ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಶ್ರೀಮತಿ ವಿಶಾಲಕ್ಷ್ಮಮ್ಮ ಎಂಬುವವರು ತುಮಕೂರು ನಗರದ ಬಡ್ಡಿಹಳ್ಳಿ ಗ್ರಾಮದ ಸರ್ವೆ ನಂಬರ್ 42/11 ರಲ್ಲಿ 0–39.25 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ವಿಭಜಿತ ವಿನ್ಯಾಸ ಅನುಮೋದನೆ ನೀಡಲು ಕೋರಿದ್ದು, ಪ್ರಸ್ತಾವನೆಯನ್ನು

ಪರಿಶೀಲಿಸಲಾಗಿ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಯ ಆದೇಶ ಸಂಖ್ಯೆ ಎಎಲ್‌ಎನ್ (ಟಿಎಂಕೆ)/ಸಿಆರ್/577/2011-12 ದಿನಾಂಕ 10-01-2012 ರಂತೆ 1 ಎಕರೆ ವಿಸ್ತೀರ್ಣ ಪ್ರದೇಶಕ್ಕೆ ವಾಸದ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುತ್ತದೆ. ಸದರಿ 1 ಎಕರೆ ಪ್ರದೇಶದಲ್ಲಿ 0-0.75 ಗುಂಟೆ ಪ್ರದೇಶವು ನಾಗರಕಟ್ಟೆ ಸ್ಥಳವನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಬಿಟ್ಟಿರುತ್ತಾರೆ. ಉಳಿಕೆ ಪ್ರದೇಶವಾದ 0-39.25 ಗುಂಟೆ ಪ್ರದೇಶಕ್ಕೆ ವಸತಿ ಉದ್ದೇಶದ ವಿಭಜಿತ ವಿನ್ಯಾಸ ಅನುಮೋದನೆ ನೀಡಲು ಪರಿಗಣಿಸಬಹುದಾಗಿದೆ. ಸದರಿ ಪ್ರದೇಶಕ್ಕೆ ರಸ್ತೆ ಸಂಪರ್ಕವಿರುತ್ತದೆ. ಪರಿಷ್ಕೃತ ಮಹಾಯೋಜನೆಯಲ್ಲಿ ವಸತಿ ವಲಯಕ್ಕೆ ಕಾಯ್ದಿರಿಸಲಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ/522/ಮೈಅಪ್ರಾ/2005 ದಿನಾಂಕ 10-03-2006 ರಂತೆ ವಿನ್ಯಾಸದ ವಿಸ್ತೀರ್ಣ 4000 ಚದುರ ಮೀಟರ್‌ಗಿಂತ ಕಡಿಮೆ ಇರುವುದರಿಂದ ಉದ್ಯಾನವನ ಹಾಗೂ ನಾಗರೀಕ ಸೌಲಭ್ಯ ನಿವೇಶನಕ್ಕಾಗಿ ಮೀಸಲಿರಿಸಬೇಕಾದ ಪ್ರದೇಶದ ಮಾರುಕಟ್ಟೆ ಶುಲ್ಕ ಪಾವತಿಸಿಕೊಂಡು ಉದ್ಯಾನವನ ಹಾಗೂ ನಾಗರೀಕ ಸೌಲಭ್ಯ ನಿವೇಶನದಿಂದ ವಿನಾಯಿತಿ ನೀಡಿ ಪ್ರಾಧಿಕಾರದ ನಿರ್ಣಯದಂತೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 34 ರನ್ವಯ ಬಡಾವಣೆಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು ವಿನ್ಯಾಸದ ಮಾಲೀಕರು ಸ್ವಂತ ಖರ್ಚಿನಿಂದ ನಿರ್ವಹಿಸುವ ಷರತ್ತಿಗೆ ಒಳಪಟ್ಟು ವಿಭಜಿತ ವಿನ್ಯಾಸ ಅನುಮೋದನೆಗೆ ಪರಿಗಣಿಸಬಹುದಾಗಿದ್ದು, ವಿಷಯವನ್ನು ಸೂಕ್ತ ನಿರ್ಣಯಕ್ಕಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :** ಸ್ಥಳ ಪರಿಶೀಲನೆಯಂತೆ, ಪ್ರಸ್ತಾವಿತ ಪ್ರದೇಶಕ್ಕೆ ರಸ್ತೆ ಸಂಪರ್ಕವಿದ್ದು, ಪರಿಷ್ಕೃತ ಮಹಾಯೋಜನೆ 2031 ರಂತೆ ಪ್ರಸ್ತಾವಿತ ಪ್ರದೇಶವು ವಸತಿ ವಲಯದಲ್ಲಿ ಬರುತ್ತದೆ. ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಪ್ರಸ್ತಾವಿತ ಪ್ರದೇಶಕ್ಕೆ ಭೂಪರಿವರ್ತನೆಯಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ / 522 / ಮೈಅಪ್ರಾ / 2005 ದಿನಾಂಕ 10-03-2006 ರಂತೆ ಪ್ರಸ್ತಾವಿತ ಪ್ರದೇಶಕ್ಕೆ ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಪಾವತಿಸಿಕೊಂಡು ವಿಭಜಿತ ನಿವೇಶನ ವಿನ್ಯಾಸ ಅನುಮೋದನೆ ನೀಡಬಹುದಾಗಿರುತ್ತದೆ.

**ತೀರ್ಮಾನ** ಸದರಿ ವಿಷಯವನ್ನು ಮತ್ತು ನಗರ ಯೋಜನಾ ಸದಸ್ಯರ ಅಭಿಪ್ರಾಯವನ್ನು ಪರಿಗಣಿಸಲಾಯಿತು. ಪ್ರಸ್ತಾವಿತ ಜಮೀನಿನಲ್ಲಿ ಸಾರ್ವಜನಿಕರು ಪೂಜೆ ಮಾಡುತ್ತಿರುವ ನಾಗರಕಟ್ಟೆ ಪ್ರದೇಶದ ವಿಸ್ತೀರ್ಣ 0-0.75 ಗುಂಟೆ ಜಮೀನನ್ನು ನಾಗರಕಟ್ಟೆಯನ್ನು ಪೂಜೆ ಮಾಡುವ ಆರ್ಚಕರಿಗೆ ಅರ್ಜಿದಾರರಾದ ಶ್ರೀಮತಿ ವಿಶಾಲಕ್ಷಮ್ಮ ಇವರು ಅರ್ಚಕರಿಗೆ ದಾನಪತ್ರ ಮಾಡಿಕೊಟ್ಟು ಅವರಿಗೆ ಬಿಟ್ಟುಕೊಟ್ಟಿರುತ್ತಾರೆ. ಅರ್ಜಿದಾರರಾದ ಶ್ರೀಮತಿ ವಿಶಾಲಕ್ಷಮ್ಮ ಎಂಬುವವರು ತುಮಕೂರು ನಗರದ ಬಡ್ಡಿಹಳ್ಳಿ ಗ್ರಾಮದ ಸರ್ವೆ ನಂಬರ್ 42/11 ರಲ್ಲಿ 0-39.25 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ವಿಭಜಿತ ವಿನ್ಯಾಸ ಅನುಮೋದನೆ ನೀಡಲು ಕೋರಿರುವ

ವಿಷಯವನ್ನು ಪರಿಗಣಿಸಿ, ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಪಾವತಿಸಿಕೊಂಡು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 34 ರನ್ವಯ ಬಡಾವಣೆಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು ಅರ್ಜಿದಾರರೇ ಸ್ವಂತ ಖರ್ಚಿನಿಂದ ನಿರ್ವಹಿಸುವ ಷರತ್ತಿಗೆ ಒಳಪಟ್ಟು ವಿಭಜಿತ ವಿನ್ಯಾಸ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 06** ತುಮಕೂರು ನಗರದ ಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂಬರ್ 4/1 ರಲ್ಲಿ ವಿಸ್ತೀರ್ಣ 0-35 ಗುಂಟೆ ಪ್ರದೇಶದಲ್ಲಿ ಉಳಿಕೆ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ತುಮಕೂರು ನಗರದ ಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂಬರ್ 4/1 ರಲ್ಲಿ ವಿಸ್ತೀರ್ಣ 0-35 ಗುಂಟೆ ಜಮೀನಿಗೆ ಪ್ರಾಧಿಕಾರದ ದಿನಾಂಕ 04-08-2011 ರ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ 11 ರ ನಿರ್ಣಯದನ್ವಯ ಸದರಿ ಜಮೀನಿಗೆ ವಿನ್ಯಾಸ ಅನುಮೋದನೆ ನೀಡಿ ಈ ಕಛೇರಿಯ ವಿನ್ಯಾಸ ಅನುಮೋದನೆ ಸಂಖ್ಯೆ ತುನಪ್ರಾ/ನಯೋ/ವಿನ್ಯಾಸ/132/2011-12 ದಿನಾಂಕ 05-11-2011 ರನ್ವಯ ಶೇಕಡ 60 ರಷ್ಟು ನಿವೇಶನಗಳನ್ನು ಅರ್ಜಿದಾರರಾದ ಶ್ರೀ ರಂಗಸ್ವಾಮಯ್ಯ ಮತ್ತು ಶ್ರೀ ರಘು ಎಂಬುವವರ ಹೆಸರಿಗೆ ಬಿಡುಗಡೆ ಮಾಡಲಾಗಿದ್ದು, ಅರ್ಜಿದಾರರು ನಿರ್ವಹಿಸಬೇಕಾದ ಅಗತ್ಯ ಕಾಮಗಾರಿಗಳನ್ನು ನಿರ್ವಹಿಸಲು ಈ ಕಛೇರಿಯ ಕಾರ್ಯಾದೇಶ ಸಂಖ್ಯೆ ತುನಪ್ರಾ/ಸಕಾಇ/ಎಲ್‌ಎಓ/132/2011-12 ದಿನಾಂಕ 02-03-2012 ರಂದು ಕಾರ್ಯಾದೇಶ ನೀಡಲಾಗಿದ್ದು. ಡಾಂಬರೀಕರಿಸಿದ ರಸ್ತೆ, ಕಲ್ಲು ಚಪ್ಪಡಿ ಚರಂಡಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ವಿದ್ಯುತ್ ಕಾಮಗಾರಿ ಕೆಲಸವನ್ನು ಪೂರ್ಣಗೊಳಿಸಿದ್ದು, ಉಳಿಕೆ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬಹುದೆಂದು ಈ ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು ವರದಿ ನೀಡಿದ್ದು, ಸದರಿ ವರದಿಯನ್ವಯ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ ಸೂಕ್ತ ಚರ್ಚೆ ಹಾಗೂ ನಿರ್ಣಯಕ್ಕಾಗಿ ಪ್ರಾಧಿಕಾರದ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :** ಪ್ರಸ್ತಾವಿತ ಪ್ರದೇಶದ ಸ್ಥಳ ಪರಿಶೀಲನೆ ಮಾಡಲಾಯಿತು ಹಾಗೂ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ಅಂತಿಮ ಅನುಮೋದನೆಗೆ ಸಿದ್ದಪಡಿಸಿರುವ ವಿನ್ಯಾಸದಂತೆ ನಿವೇಶನಗಳನ್ನು ರಚಿಸಲಾಗಿರುತ್ತದೆ. ಆದ್ದರಿಂದ ಉಳಿಕೆ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬಹುದು.

**ತೀರ್ಮಾನ** ಸದರಿ ವಿಷಯವು ಈಗಾಗಲೇ ದಿನಾಂಕ 31-03-2012 ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ 74 ರಲ್ಲಿ ಚರ್ಚಿಸಿ ತೀರ್ಮಾನ ಕೈಗೊಂಡಿರುವ ಅಂಶವನ್ನು ಪರಿಗಣಿಸಿದ ನಂತರ ಸದರಿ ವಿಷಯವನ್ನು ಕೈಬಿಡಲು ತೀರ್ಮಾನಿಸಲಾಯಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ಇತರೆ ವಿಷಯಗಳು**

* * * *

**ವಿಷಯ ಸಂಖ್ಯೆ 07** ಪ್ರಾಧಿಕಾರದ ಸ್ಥಳಿಯ ಟೆಂಡರ್ ಪ್ರಕಟಣೆ ಸಂಖ್ಯೆ ಟಿಯುಡಿಎ/ಟೆಂಡರ್/ಸಕಾಇ/20/2011-12 ದಿನಾಂಕ 08-03-2012 ರಂದು ಕರೆದಿರುವ ಕಾಮಗಾರಿಗಳ ಟೆಂಡರ್ ಅನುಮೋದಿಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಕೈಗೊಳ್ಳಲು ಉದ್ದೇಶಿಸಿರುವ ವಿವಿಧ ಬಡಾವಣೆಗಳ ಒಟ್ಟು 8 ಉದ್ಯಾನವನಗಳಿಗೆ ಕೊಳವೆ ಬಾವಿ ಕೊರೆಯುವ ಕಾಮಗಾರಿ, ಮೆಳೇಕೋಟೆ-ವೀರಸಾಗರ ವಸತಿ ಬಡಾವಣೆಯ ರಸ್ತೆ ಅಭಿವೃದ್ಧಿ ಕಾಮಗಾರಿ, ಉದ್ಯಾನವನಗಳಿಗೆ ಚೈನ್ ಲಿಂಕ್ ತಂತಿ ಬೇಲಿ ಅಳವಡಿಸುವ ಕಾಮಗಾರಿ ಹಾಗೂ ಅಮಾನಿಕೆರೆಯ ಬೆಂಗಳೂರು ರಸ್ತೆಯ ಬಳಿ ಚೈನ್ ಲಿಂಕ್ ಬೇಲಿಯ ಬೇಸ್‌ಮೆಂಟ್ ಪಕ್ಕದಲ್ಲಿ Plantation Box ನಿರ್ಮಿಸಿ ಗಿಡಗಳನ್ನು ಬೆಳೆಸುವ ಕಾಮಗಾರಿಗಳಿಗೆ E-Procurement ಮುಖಾಂತರ ಟೆಂಡರ್ ಅಧಿಸೂಚನೆಯನ್ನು ಈ ಹಿಂದೆ ದಿನಾಂಕ 08-03-12 ರಂದು ಹೊರಡಿಸಿದ್ದು, ಟೆಂಡರ್‌ಗಳನ್ನು ದಿನಾಂಕ 31-03-2012 ರಂದು ತೆರೆಯಲಾಗಿರುತ್ತದೆ. ಟೆಂಡರ್‌ಗಳಲ್ಲಿ ಭಾಗವಹಿಸಿದ್ದ ಗುತ್ತಿಗೆದಾರರ ಟೆಂಡರ್ Evaluation ಕೈಗೊಂಡು ನಿಗಧಿ ಪಡಿಸಿದ ಮಾನದಂಡಗಳಿಗೆ ಅನುಸಾರವಾಗಿ ತಾಂತ್ರಿಕ ಅರ್ಹತೆಯನ್ನು ಪರಿಶೀಲಿಸಿದೆ. ತಾಂತ್ರಿಕ ಅರ್ಹತೆ ಪಡೆದ ಗುತ್ತಿಗೆದಾರರ ಟೆಂಡರ್ ದರಗಳ ಆಧಾರದ ಮೇಲೆ ತುಲನಾತ್ಮಕ ಪಟ್ಟಿಯನ್ನು ತಯಾರಿಸಿದ್ದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

**ಕ್ರಮ ಸಂಖ್ಯೆ-1 ಕೆಲಸದ ಹೆಸರು :** ಮೆಳೇಕೋಟೆ-ವೀರಸಾಗರ ವಸತಿ ಬಡಾವಣೆಯ ರಸ್ತೆ ಸಂಖ್ಯೆ ಡಿ26 ರಿಂದ ಡಿ30, ಸಿ12 ರಸ್ತೆಗಳಿಗೆ ಡಾಂಬರೀಕರಣ ಇ22 ರಸ್ತೆ ಅಭಿವೃದ್ಧಿ ಕಾಮಗಾರಿ.

| ಕ್ರ ಸಂ. | ತಾಂತ್ರಿಕ ಅರ್ಹತೆ ಪಡೆದ ಗುತ್ತಿಗೆದಾರರ ಹೆಸರು | ಅಂದಾಜು ಮೊತ್ತ | ಗುತ್ತಿಗೆದಾರರು ನಮೂದಿಸಿರುವ ಮೊತ್ತ | ವ್ಯತ್ಯಾಸದ ಮೊತ್ತ | ಶೇಕಡವಾರು ಹೆಚ್ಚು/ ಕಡಿಮೆ |
|---|---|---|---|---|---|
| 1. | ಶ್ರೀ ಹೆಚ್.ನಾರಾಯಣಪ್ಪ (1ನೇ ದರ್ಜೆ ಗುತ್ತಿಗೆದಾರರು ತುಮಕೂರು) | 1979861.50 | 1939747.00 | 40114.50 | 2.03 (ಕಡಿಮೆ) |
| 2. | ಶ್ರೀ ರವೀಂದ್ರ (1ನೇ ದರ್ಜೆ ಗುತ್ತಿಗೆದಾರರು ತುಮಕೂರು) | 1979861.50 | 2044270.00 | 45898.50 | 2.32 (ಹೆಚ್ಚು) |

ಮೇಲ್ಕಂಡ ಕಾಮಗಾರಿಗೆ ಇಬ್ಬರು ಗುತ್ತಿಗೆದಾರರು ಟೆಂಡರ್ ಸಲ್ಲಿಸಿರುತ್ತಾರೆ. ಈ ಇಬ್ಬರ ಗುತ್ತಿಗೆದಾರರ ದರಗಳನ್ನು ತುಲನಾತ್ಮಕ ಪಟ್ಟಿಯಲ್ಲಿ ಪರಿಗಣಿಸಲಾಗಿದೆ. ಅತೀ ಕಡಿಮೆ ದರ ನಮೂದಿಸಿರುವ ಶ್ರೀ ಹೆಚ್.ನಾರಾಯಣಪ್ಪ, 1ನೇ ದರ್ಜೆ ಗುತ್ತಿಗೆದಾರರು, ತುಮಕೂರು ಇವರು ರೂ. 1939747.00 ಮೊತ್ತವನ್ನು ನಮೂದಿಸಿದ್ದು, ಈ ದರವು ಮಂಜೂರಾದ ಅಂದಾಜು ಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇಕಡ 2.03 ಕಡಿಮೆ ಇರುತ್ತದೆ. ಆದುದರಿಂದ ಸದರಿಯವರ ಟೆಂಡರ್‌ನ್ನು ಅನುಮೋದಿಸಿ ಕಾರ್ಯಾದೇಶ ನೀಡಲು ಕ್ರಮವಹಿಸಿದ್ದು ಘಟನೋತ್ತರ ಅನುಮೋದನೆಗಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ಕ್ರಮ ಸಂಖ್ಯೆ– 2 ಕೆಲಸದ ಹೆಸರು :** ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿ ಪಡಿಸಲಾದ 8 ಉದ್ಯಾನವನಗಳಿಗೆ ಕೊಳವೆ ಬಾವಿ ಕೊರೆಯುವ ಕಾಮಗಾರಿ.

| ಕ್ರ ಸಂ. | ತಾಂತ್ರಿಕ ಅರ್ಹತೆ ಪಡೆದ ಗುತ್ತಿಗೆದಾರರ ಹೆಸರು | ಅಂದಾಜು ಮೊತ್ತ | ಗುತ್ತಿಗೆದಾರರು ನಮೂಸಿದಿರುವ ಮೊತ್ತ | ವ್ಯತ್ಯಾಸದ ಮೊತ್ತ | ಶೇಕಡವಾರು ಹೆಚ್ಚು/ ಕಡಿಮೆ |
|---|---|---|---|---|---|
| 1 | ಶ್ರೀ ಎನ್.ಸಿ.ಚೆನ್ನಕೇಶವ (2ನೇ ದರ್ಜೆ ಗುತ್ತಿಗೆದಾರರು ತುಮಕೂರು) | 980400.00 | 1028184.00 | 47784.00 | 4.87 (ಹೆಚ್ಚು) |
| 2. | ಶ್ರೀ ನಾಗರಾಜು (3ನೇ ದರ್ಜೆ ಗುತ್ತಿಗೆದಾರರು ತುಮಕೂರು) | 980400.00 | 1076950.72 | 96550.72 | 9.85 (ಹೆಚ್ಚು) |

ಮೇಲ್ಕಂಡ ಕಾಮಗಾರಿಗೆ ಇಬ್ಬರು ಗುತ್ತಿಗೆದಾರರು ಟೆಂಡರ್ ಸಲ್ಲಿಸಿರುತ್ತಾರೆ. ಈ ಇಬ್ಬರ ಗುತ್ತಿಗೆದಾರರ ದರಗಳನ್ನು ತುಲನಾತ್ಮಕ ಪಟ್ಟಿಯಲ್ಲಿ ಪರಿಗಣಿಸಲಾಗಿದೆ. ಅತೀ ಕಡಿಮೆ ದರ ನಮೂದಿಸಿರುವ ಶ್ರೀ ಎನ್.ಸಿ.ಚೆನ್ನಕೇಶವ, 2ನೇ ದರ್ಜೆ ಗುತ್ತಿಗೆದಾರರು, ತುಮಕೂರು ಇವರು ರೂ. 1028184.00 ಮೊತ್ತವನ್ನು ನಮೂದಿಸಿದ್ದು, ಈ ದರವು ಮಂಜೂರಾದ ಅಂದಾಜು ಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇ. 4.87 ಹೆಚ್ಚಿಗೆ ಇರುತ್ತದೆ. ಆದುದರಿಂದ ಸದರಿ ಗುತ್ತಿಗೆದಾರರನ್ನು ಸಂಧಾನಕ್ಕೆ ಆಹ್ವಾನಿಸಿ ದರಗಳನ್ನು ಕಡಿಮೆಮಾಡಿ ಟೆಂಡರ್‌ನ್ನು ಅನುಮೋದಿಸಿ ಕಾರ್ಯದೇಶ ನೀಡುವ ಸಂಬಂಧ ಅನುಮೋದನೆಗಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ಕ್ರಮ ಸಂಖ್ಯೆ– 3 ಕೆಲಸದ ಹೆಸರು :** ತುಮಕೂರು ಅಮಾನಿಕೆರೆಯ ಬೆಂಗಳೂರು ಬಂಡ್‌ರಸ್ತೆಯ ಬಳಿ ಚೈನ್ ಲಿಂಕ್ ಬೇಲಿಯ ಬೇಸ್‌ಮೆಂಟ್ ಪಕ್ಕದಲ್ಲಿ Plantation Box ನಿರ್ಮಿಸಿ ಗಿಡಗಳನ್ನು ಬೆಳೆಸುವ ಕಾಮಗಾರಿ.

| ಕ್ರ ಸಂ. | ತಾಂತ್ರಿಕ ಅರ್ಹತೆ ಪಡೆದ ಗುತ್ತಿಗೆದಾರರ ಹೆಸರು | ಅಂದಾಜು ಮೊತ್ತ | ಗುತ್ತಿಗೆದಾರರು ನಮೂದಿಸಿರುವ ಮೊತ್ತ | ವ್ಯತ್ಯಾಸದ ಮೊತ್ತ | ಶೇಕಡವಾರು ಹೆಚ್ಚು/ ಕಡಿಮೆ |
|---|---|---|---|---|---|
| 1. | ಶ್ರೀ ಜಗದೀಶಯ್ಯ ಕೆ.ಆರ್ (ಮೆ॥ ಗ್ರೀನ್ ಎನ್‌ವಿರಾನ್‌ಮೆಂಟ್ ಲ್ಯಾಂಡ್ ಸ್ಕೇಪ್ ತುಮಕೂರು) | 698398.00 | 657500.00 | 40898.00 | 5.86 (ಕಡಿಮೆ) |

| | | | | | |
|---|---|---|---|---|---|
| 2. | ಶ್ರೀ ಜಿ.ಎಸ್. ರವಿಶಂಕರ್ (ಮೆ॥ ನಿಸರ್ಗ ಗಾರ್ಡನ್ ಎಂಟರ್‌ಪ್ರೈಸಸ್ ತುಮಕೂರು) | 698398.00 | 699500.00 | 1102.00 | 0.16 (ಹೆಚ್ಚು) |

ಮೇಲ್ಕಂಡ ಕಾಮಗಾರಿಗೆ ಇಬ್ಬರು ಗುತ್ತಿಗೆದಾರರು ಟೆಂಡರ್ ಸಲ್ಲಿಸಿರುತ್ತಾರೆ. ಈ ಇಬ್ಬರು ಗುತ್ತಿಗೆದಾರರ ದರಗಳನ್ನು ತುಲನಾತ್ಮಕ ಪಟ್ಟಿಯಲ್ಲಿ ಪರಿಗಣಿಸಲಾಗಿದೆ. ಅತೀ ಕಡಿಮೆ ದರ ನಮೂದಿಸಿರುವ ಶ್ರೀ ಜಗದೀಶಯ್ಯ ಕೆ.ಆರ್, ಮೆ॥ ಗ್ರೀನ್ ಎನ್‌ವಿರಾನ್‌ಮೆಂಟ್ ಲ್ಯಾಂಡ್ ಸ್ಕೇಪ್, ತುಮಕೂರು. ಇವರು ರೂ.657500.00 ಮೊತ್ತವನ್ನು ನಮೂದಿಸಿದ್ದು, ಈ ದರವು ಮಂಜೂರಾದ ಅಂದಾಜು ಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇಕಡ 5.86 ಕಡಿಮೆ ಇರುತ್ತದೆ. ಆದುದರಿಂದ ಸದರಿಯವರ ಟೆಂಡರ್‌ನ್ನು ಅನುಮೋದಿಸಿ ಕಾರ್ಯಾದೇಶ ನೀಡಲು ಕ್ರಮವಹಿಸಿದ್ದು ಘಟನೋತ್ತರ ಅನುಮೋದನೆಗಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ಕ್ರಮ ಸಂಖ್ಯೆ– 4 ಕೆಲಸದ ಹೆಸರು :** ತುಮಕೂರು ನಗರದ ಸತ್ಯಮಂಗಲ ಗ್ರಾಮದ ಸರ್ವೆ ನಂಬರ್ 279/2ಎ,2ಬಿ,281, 282/2 ರಲ್ಲಿನ ಉದ್ಯಾನವನಕ್ಕೆ ಚೈನ್‌ಲಿಂಕ್ ತಂತಿ ಬೇಲಿ ಅಳವಡಿಸುವ ಕಾಮಗಾರಿ.

| ಕ್ರ ಸಂ. | ತಾಂತ್ರಿಕ ಅರ್ಹತೆ ಪಡೆದ ಗುತ್ತಿಗೆದಾರರ ಹೆಸರು | ಅಂದಾಜು ಮೊತ್ತ | ಗುತ್ತಿಗೆದಾರರು ನಮೂದಿಸಿರುವ ಮೊತ್ತ | ವ್ಯತ್ಯಾಸದ ಮೊತ್ತ | ಶೇಕಡವಾರು ಹೆಚ್ಚು/ ಕಡಿಮೆ |
|---|---|---|---|---|---|
| 1. | ಶ್ರೀ ಪುರುಷೋತ್ತಮ (ಮೊದಲನೇ ದರ್ಜೆ ಗುತ್ತಿಗೆದಾರರು ಬೆಂಗಳೂರು) | 1394127.12 | 1349861.40 | 44265.72 | 3.18 (ಕಡಿಮೆ) |
| 2. | ಶ್ರೀ ಪಿ.ವಿ.ಗಿರಿರಾಜು (ಮೊದಲನೇ ದರ್ಜೆ ಗುತ್ತಿಗೆದಾರರು ಬೆಂಗಳೂರು) | 1394127.12 | 1483254.00 | 89126.88 | 6.39 (ಹೆಚ್ಚು) |

ಮೇಲ್ಕಂಡ ಕಾಮಗಾರಿಗೆ ಇಬ್ಬರು ಗುತ್ತಿಗೆದಾರರು ಟೆಂಡರ್ ಸಲ್ಲಿಸಿರುತ್ತಾರೆ. ಈ ಇಬ್ಬರು ಗುತ್ತಿಗೆದಾರರ ದರಗಳನ್ನು ತುಲನಾತ್ಮಕ ಪಟ್ಟಿಯಲ್ಲಿ ಪರಿಗಣಿಸಲಾಗಿದೆ. ಅತೀ ಕಡಿಮೆ ದರ ನಮೂದಿಸಿರುವ ಶ್ರೀ ಪುರುಷೋತ್ತಮ, 1ನೇ ದರ್ಜೆ ಗುತ್ತಿಗೆದಾರರು, ಬೆಂಗಳೂರು. ಇವರು ರೂ. 1349861.40 ಮೊತ್ತವನ್ನು ನಮೂದಿಸಿದ್ದು, ಈ ದರವು ಮಂಜೂರಾದ ಅಂದಾಜು ಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇಕಡ 3.18 ಕಡಿಮೆ ಇರುತ್ತದೆ. ಆದುದರಿಂದ ಸದರಿಯವರ ಟೆಂಡರ್‌ನ್ನು ಅನುಮೋದಿಸಿ ಕಾರ್ಯಾದೇಶ ನೀಡಲು ಕ್ರಮವಹಿಸಿದ್ದು ಘಟನೋತ್ತರ ಅನುಮೋದನೆಗಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ಕ್ರಮ ಸಂಖ್ಯೆ (1) ರಿಂದ (2) ರ ಕಾಮಗಾರಿಗಳಿಗೆ ಅನುಮೋದನೆ ನೀಡಿರುವುದನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. ಕ್ರಮ ಸಂಖ್ಯೆ (3) ರ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯು ಸದರಿ ರಸ್ತೆಯನ್ನು ಅಭಿವೃದ್ಧಿ ಪಡಿಸಿದ

ನಂತರ ಕಾಮಗಾರಿ ನೀಡುವುದೆಂದು ಮತ್ತು ಕ್ರಮ ಸಂಖ್ಯೆ (4) ರ ಕಾಮಗಾರಿಯ ಸಂಬಂಧ ಆ ಭಾಗದ ಪ್ರದೇಶದಲ್ಲಿ ಹೆಚ್ಚಿನ ಅಭಿವೃದ್ಧಿಯಾಗಿಲ್ಲದ ಕಾರಣ ಸದರಿ ಕಾಮಗಾರಿಯನ್ನು ಹೆಚ್ಚು ಅಭಿವೃದ್ಧಿ ಹೊಂದಿರುವ ಭಾಗದ ಉದ್ಯಾನವನದ ಅಭಿವೃದ್ಧಿಗೆ ಸ್ಥಳಾಂತರಿಸಿ, ನಿರ್ವಹಿಸಲು ಕ್ರಮಕೈಗೊಳ್ಳಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 08** ಪ್ರಾಧಿಕಾರದ ಸ್ಥಳಿಯ ಟೆಂಡರ್ ಪ್ರಕಟಣೆ ಸಂಖ್ಯೆ ಟಿಯುಡಿಎ/ಟೆಂಡರ್/ಸಕಾಇ/19/2011-12 ದಿನಾಂಕ 24-02-2012 ರಂದು ಕರೆದಿರುವ ಕಾಮಗಾರಿಗಳ ಟೆಂಡರ್ ಅನುಮೋದಿಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ತುಮಕೂರು ಅಮಾನಿಕೆರೆಯ ಕೋತಿತೋಪು ಉದ್ಯಾನವನಕ್ಕೆ 52 ಸಂಖ್ಯೆ ಎಲ್.ಇ.ಡಿ. ಸೋಲಾರ್ ಸ್ಟ್ರೀಟ್ ಲೈಟ್‌ಗಳನ್ನು ಅಳವಡಿಸುವ ಕಾಮಗಾರಿಗೆ E-Procurement ಮುಖಾಂತರ ಟೆಂಡರ್ ಅಧಿಸೂಚನೆಯನ್ನು ಈ ಹಿಂದೆ ದಿನಾಂಕ 24-02-12 ರಂದು ಹೊರಡಿಸಿದ್ದು, ಟೆಂಡರ್‌ಗಳನ್ನು ದಿನಾಂಕ 16-03-2012 ರಂದು ತೆರೆಯಲಾಗಿರುತ್ತದೆ. ಟೆಂಡರ್‌ಗಳಲ್ಲಿ ಭಾಗವಹಿಸಿದ್ದ ಗುತ್ತಿಗೆದಾರರ ಟೆಂಡರ್ Evaluation ಕೈಗೊಂಡು ನಿಗಧಿ ಪಡಿಸಿದ ಮಾನದಂಡಗಳಿಗೆ ಅನುಸಾರವಾಗಿ ತಾಂತ್ರಿಕ ಅರ್ಹತೆಯನ್ನು ಪರಿಶೀಲಿಸಿದೆ. ತಾಂತ್ರಿಕ ಅರ್ಹತೆ ಪಡೆದ ಗುತ್ತಿಗೆದಾರರ ಟೆಂಡರ್ ದರಗಳ ಆಧಾರದ ಮೇಲೆ ತುಲನಾತ್ಮಕ ಪಟ್ಟಿಯನ್ನು ತಯಾರಿಸಿದ್ದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

**ಕ್ರಮ ಸಂಖ್ಯೆ-1 ಕೆಲಸದ ಹೆಸರು :** ತುಮಕೂರು ಅಮಾನಿಕೆರೆ ಕೋತಿತೋಪು ಉದ್ಯಾನವನಕ್ಕೆ 36 Watt ಸೋಲಾರ್ ಸ್ಟ್ರೀಟ್ ಲೈಟ್‌ಗಳನ್ನು ಅಳವಡಿಸಿ ನಿರ್ವಹಣೆ ಮಾಡುವ ಕಾಮಗಾರಿ.

| ಕ್ರ ಸಂ. | ತಾಂತ್ರಿಕ ಅರ್ಹತೆ ಪಡೆದ ಗುತ್ತಿಗೆದಾರರ ಹೆಸರು | ಅಂದಾಜು ಮೊತ್ತ | ಗುತ್ತಿಗೆದಾರರು ನಮೂಸಿದಿರುವ ಮೊತ್ತ | ವ್ಯತ್ಯಾಸದ ಮೊತ್ತ | ಶೇಕಡವಾರು ಹೆಚ್ಚು/ ಕಡಿಮೆ |
|---|---|---|---|---|---|
| 1. | ಮೆ॥ ಬಿಪಿನ್ ಇಂಜಿನಿಯರ್ಸ್ ಪ್ರೈ.ಲಿಮಿಟೆಡ್ ಪೂನಾ | 1965600.00 | 1885000.00 | 80600.00 | 4.10 (ಕಡಿಮೆ) |
| 2. | ಮೆ॥ ದೀಪಾ ಸೋಲಾರ್ ಲೈಟಿಂಗ್ ಸಿಸ್ಟಮ್, ಬೆಂಗಳೂರು | 1965600.00 | 1939600.00 | 26000.00 | 1.32 (ಕಡಿಮೆ) |

ಮೇಲ್ಕಂಡ ಕಾಮಗಾರಿಗೆ ಇಬ್ಬರು ಕಂಪನಿಯವರು ಟೆಂಡರ್ ಸಲ್ಲಿಸಿರುತ್ತಾರೆ. ಈ ಇಬ್ಬರು ಕಂಪನಿಯವರ ದರಗಳನ್ನು ತುಲನಾತ್ಮಕ ಪಟ್ಟಿಯಲ್ಲಿ ಪರಿಗಣಿಸಲಾಗಿದೆ. ಅತೀ ಕಡಿಮೆ ದರ ನಮೂದಿಸಿರುವ ಮೆ॥ ಬಿಪಿನ್ ಇಂಜಿನಿಯರ್ಸ್,ಪ್ರೈ.ಲಿಮಿಟೆಡ್ ಪೂನಾ ಇವರು ರೂ. 1885000.00 ಮೊತ್ತವನ್ನು ನಮೂದಿಸಿದ್ದು,

ಈ ದರವು ಮಂಜೂರಾದ ಅಂದಾಜು ಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇಕಡ 4.10 ಕಡಿಮೆ ಇರುತ್ತದೆ. ಆದುದರಿಂದ ಸದರಿಯವರ ಟೆಂಡರ್‌ನ್ನು ಅನುಮೋದಿಸಿ ಕಾರ್ಯಾದೇಶ ನೀಡಲು ಅನುಮೋದನೆಗಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ಮೆ॥ ಬಿಪಿನ್ ಇಂಜಿನಿಯರ್ಸ್ ಪ್ರೈ.ಲಿಮಿಟೆಡ್ ಪೂನಾ ರವರು ಕಡಿಮೆ ದರ ರೂ.1885000.00 ಗಳನ್ನು ನಮೂದಿಸಿರುವ ಕಾರಣ ಅವರಿಗೆ ಕಾರ್ಯಾದೇಶ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ಸಂಖ್ಯೆ 09** ತುಮಕೂರು ನಗರದ 31ನೇ ವಾರ್ಡಿನ ನೃಪತುಂಗ ಬಡಾವಣೆಯಲ್ಲಿನ ಉದ್ಯಾನವನ ಅಭಿವೃದ್ಧಿಪಡಿಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ನಗರದ 31ನೇ ವಾರ್ಡಿನ ನೃಪತುಂಗ ಬಡಾವಣೆಯಲ್ಲಿ ಮೀಸಲಿಟ್ಟಿರುವ ಉದ್ಯಾನವನದ ಜಾಗದಲ್ಲಿ ಚೈನ್ ಲಿಂಕ್ ತಂತಿ ಬೇಲಿಯನ್ನು ನಿರ್ಮಾಣ ಮಾಡಲು ಉದ್ದೇಶಿಸಿದ್ದು, ಸದರಿ ಉದ್ಯಾನವನದ ಸ್ಥಳದಲ್ಲಿ ಸಾರ್ವಜನಿಕರು ಕಸ ಕಡ್ಡಿಯಿಂದ ಸ್ಥಳವನ್ನು ದುರುಪಯೋಗ ಮಾಡುತ್ತಿರುವುದರಿಂದ ತೊಂದರೆಯಾಗುತ್ತಿರುವ ಬಗ್ಗೆ ಈ ಬಡಾವಣೆಯ ಸಮಸ್ತ ನಾಗರೀಕರು ಹಾಗೂ ಸಾರ್ವಜನಿಕರು ಉದ್ಯಾನವನಕ್ಕೆ ಚೈನ್ ಲಿಂಕ್ ತಂತಿ ಬೇಲಿಯನ್ನು ಅಳವಡಿಸಲು ಮನವಿ ಮಾಡಿರುತ್ತಾರೆ. ಅದರಂತೆ ಸದರಿ ಉದ್ಯಾನವನಕ್ಕೆ ಚೈನ್ ಲಿಂಕ್ ತಂತಿ ಬೇಲಿಯನ್ನು ಅಳವಡಿಸಲು ಪ್ರಸ್ತುತ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಅಂದಾಜು ಮೊತ್ತವು ರೂ.9.95 ಲಕ್ಷಗಳಾಗಿರುತ್ತದೆ. ಆದುದರಿಂದ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್ ಕರೆಯಲು ಅನುಮೋದನೆಗಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. 3ನೇ ವಾರ್ಡಿನ ಸರ್ವೆ ನಂಬರ್ 51/1ಎ ರಲ್ಲಿ ನೃಪತುಂಗ ಬಡಾವಣೆಯಲ್ಲಿ ಉದ್ಯಾನವನ ಅಭಿವೃದ್ಧಿ ಪಡಿಸಲು ಟೆಂಡರ್ ಕರೆಯಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 10** ತುಮಕೂರು ಕಸಬಾ ಗ್ರಾಮದ ಶಿರಾಗೇಟ್‌ನ ವ್ಯಾಪ್ತಿಯ ಸರ್ವೆ ನಂಬರ್ 181/1 ರಲ್ಲಿನ ಬಡಾವಣೆಯಲ್ಲಿನ ಉದ್ಯಾನವನ ಅಭಿವೃದ್ಧಿಪಡಿಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ಕಸಬಾ ಗ್ರಾಮದ ಶಿರಾಗೇಟ್‌ನ ವ್ಯಾಪ್ತಿಯ ಸರ್ವೆ ನಂಬರ್ 181/1 ರಲ್ಲಿನ ಬಡಾವಣೆಯಲ್ಲಿ ಮೀಸಲಿಟ್ಟಿರುವ ಉದ್ಯಾನವನದ ಜಾಗದಲ್ಲಿ ಚೈನ್ ಲಿಂಕ್ ತಂತಿ ಬೇಲಿಯನ್ನು ನಿರ್ಮಾಣ ಮಾಡಲು ಉದ್ದೇಶಿಸಿದ್ದು, ಸದರಿ ಉದ್ಯಾನವನದ ಸ್ಥಳದಲ್ಲಿ ಸಾರ್ವಜನಿಕರು

ಕಸ ಕಡ್ಡಿಯಿಂದ ಸ್ಥಳವನ್ನು ದುರುಪಯೋಗ ಮಾಡುತ್ತಿರುವುದರಿಂದ ತೊಂದರೆಯಾಗುತ್ತಿರುವ ಬಗ್ಗೆ ಈ ಬಡಾವಣೆಯ ಚಂದನ ನಾಗರೀಕ ವೇದಿಕೆ (ರಿ), ಕಾಳಿದಾಸ ನಗರ, ತುಮಕೂರು ಹಾಗೂ ಸಾರ್ವಜನಿಕರು ಉದ್ಯಾನವನಕ್ಕೆ ಚೈನ್ ಲಿಂಕ್ ತಂತಿ ಬೇಲಿಯನ್ನು ಅಳವಡಿಸಲು ಮನವಿ ಮಾಡಿರುತ್ತಾರೆ. ಅದರಂತೆ ಸದರಿ ಉದ್ಯಾನವನಕ್ಕೆ ಚೈನ್ ಲಿಂಕ್ ತಂತಿ ಬೇಲಿಯನ್ನು ಅಳವಡಿಸಲು ಪ್ರಸ್ತುತ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಅಂದಾಜು ಮೊತ್ತವು ರೂ.9.85 ಲಕ್ಷಗಳಾಗಿರುತ್ತದೆ. ಆದುದರಿಂದ ಸದರಿ ಕಾಮಗಾರಿಯನ್ನು ತೆಗೆದುಕೊಳ್ಳಲು ಟೆಂಡರ್ ಕರೆಯಲು ಅನುಮೋದನೆಗಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ಈಗಾಗಲೇ ಖಾಸಗಿ ವಿನ್ಯಾಸದಲ್ಲಿ ಉದ್ಯಾನವನಕ್ಕೆ ಚೈನ್‌ಲಿಂಕ್ ಪೆನ್ಸಿಂಗ್ ಅಳವಡಿಸಿದ್ದು, ಅದಕ್ಕೆ ಹೊಂದಿಕೊಂಡಂತಿರುವ ಈ ಉದ್ಯಾನವನವನ್ನು ಸೇರಿಸಿಕೊಂಡು ಚೈನ್ ಲಿಂಕ್ ತಂತಿ ಬೇಲಿ ಅಳವಡಿಸಲು ಟೆಂಡರ್ ಕರೆಯಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 11** ತುಮಕೂರು ನಗರದ ಗೋಕುಲ ಬಡಾವಣೆಯ ಮೊದಲನೇ ಹಂತ 2ನೇ ಅಡ್ಡ ರಸ್ತೆಯಲ್ಲಿರುವ ಮಂದಾರವನ ಉದ್ಯಾನವನ ಅಭಿವೃದ್ಧಿಪಡಿಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ನಗರದ ಗೋಕುಲ ಬಡಾವಣೆಯ ಮೊದಲನೇ ಹಂತ 2ನೇ ಅಡ್ಡ ರಸ್ತೆಯಲ್ಲಿ ಮೀಸಲಿಟ್ಟಿರುವ ಮಂದಾರವನ ಉದ್ಯಾನವನದ ಜಾಗದಲ್ಲಿ ಚೈನ್ ಲಿಂಕ್ ತಂತಿ ಬೇಲಿಯನ್ನು ನಿರ್ಮಾಣ ಮಾಡಲು ಉದ್ದೇಶಿಸಿದ್ದು, ಸದರಿ ಉದ್ಯಾನವನದ ಸ್ಥಳದಲ್ಲಿ ಸಾರ್ವಜನಿಕರು ಕಸ ಕಡ್ಡಿಯಿಂದ ಸ್ಥಳವನ್ನು ದುರುಪಯೋಗ ಮಾಡುತ್ತಿರುವುದರಿಂದ ತೊಂದರೆಯಾಗುತ್ತಿರುವ ಬಗ್ಗೆ ಈ ಬಡಾವಣೆಯ ಸಮಸ್ತ ನಾಗರೀಕರು ಹಾಗೂ ಸಾರ್ವಜನಿಕರು ಉದ್ಯಾನವನಕ್ಕೆ ಚೈನ್ ಲಿಂಕ್ ತಂತಿ ಬೇಲಿಯನ್ನು ಅಳವಡಿಸಲು ಮನವಿ ಮಾಡಿರುತ್ತಾರೆ. ಅದರಂತೆ ಸದರಿ ಉದ್ಯಾನವನಕ್ಕೆ ಚೈನ್ ಲಿಂಕ್ ತಂತಿ ಬೇಲಿಯನ್ನು ಅಳವಡಿಸಲು ಪ್ರಸ್ತುತ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಅಂದಾಜು ಮೊತ್ತವು ರೂ.9.98 ಲಕ್ಷಗಳಾಗಿರುತ್ತದೆ. ಆದುದರಿಂದ ಸದರಿ ಕಾಮಗಾರಿಯನ್ನು ತೆಗೆದುಕೊಳ್ಳಲು ಅನುವಾಗುವಂತೆ ಟೆಂಡರ್ ಕರೆಯಲು ಅನುಮೋದನೆಗಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ಗೋಕುಲ ಬಡಾವಣೆಯ ಕ್ಯಾತ್ಸಂದ್ರ ಗ್ರಾಮದ ಸರ್ವೆ ನಂಬರ್ 39/1 ರ ವಿನ್ಯಾಸದಲ್ಲಿನ

2ನೇ ಅಡ್ಡ ರಸ್ತೆ ಗೋಕುಲ ಬಡಾವಣೆಯ ಉದ್ಯಾನವನವನ್ನು ಚೈನ್‌ಲಿಂಕ್ ಫೆನ್ಸಿಂಗ್ ಅಳವಡಿಸುವ ಕಾಮಗಾರಿಗೆ ಟೆಂಡರ್ ಕರೆಯಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 12** ತುಮಕೂರು ಅಮಾನಿಕೆರೆಯ ಗಡಿಯ ಭಾಗದಲ್ಲಿ ಸತ್ಯಮಂಗಲ ರಸ್ತೆಗೆ ಹೊಂದಿಕೊಂಡಂತೆ ಇರುವ ಜಮ್ಮಾ ಮಸೀದಿ ಆವರಣದಲ್ಲಿ ಶೌಚಾಲಯ ಬ್ಲಾಕ್ ನಿರ್ಮಿಸಲು ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ** ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ಅಮಾನಿಕೆರೆಯ ಗಡಿಯ ಭಾಗದಲ್ಲಿ ಸತ್ಯಮಂಗಲ ರಸ್ತೆಗೆ ಹೊಂದಿಕೊಂಡಂತೆ ಜಮ್ಮಾ ಮಸೀದಿಯ ಜಾಗವಿದ್ದು, ಮಸೀದಿಯ ಪೂರ್ವಭಾಗಕ್ಕೆ ಅಮಾನಿಕೆರೆಯ ಗಡಿಭಾಗ ಇದ್ದು, ಮಸೀದಿ ಸಮಿತಿಯವರು ಕೆರೆಯ ಪ್ರದೇಶವನ್ನು ಅನಧಿಕೃತವಾಗಿ ಒತ್ತುವರಿ ಮಾಡಿ ಶೌಚಾಲಯ ಬ್ಲಾಕ್ ಅನ್ನು ನಿರ್ಮಿಸಿರುತ್ತಾರೆ. ಆದ್ದರಿಂದ ಸದರಿ ಒತ್ತುವರಿ ಕಟ್ಟಡವನ್ನು ತೆರವುಗೊಳಿಸುವ ಬಗ್ಗೆ ಮಸೀದಿ ಸಮಿತಿಯ ಸದಸ್ಯರುಗಳೊಂದಿಗೆ ದಿನಾಂಕ 02–03–2012 ರಂದು ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಸಭೆಯನ್ನು ನಡೆಸಲಾಗಿದ್ದು, ಸಭೆಯಲ್ಲಿ ಸಮಿತಿ ಸದಸ್ಯರು ಬದಲಿಯಾಗಿ ಹೊಸದಾಗಿ ಶೌಚಾಲಯ ಬ್ಲಾಕ್ ಅನ್ನು ನಿರ್ಮಿಸಿಕೊಡಲು ಮನವಿ ಮಾಡಿರುತ್ತಾರೆ. ಆದ್ದರಿಂದ, ಸಭೆಯಲ್ಲಿನ ತೀರ್ಮಾನದಂತೆ ಶೌಚಾಲಯ ಬ್ಲಾಕ್ ನಿರ್ಮಾಣಕ್ಕಾಗಿ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಅಂದಾಜು ಮೊತ್ತವು ರೂ.2.45 ಲಕ್ಷಗಳಾಗಿರುತ್ತದೆ. ಆದುದರಿಂದ, ಶೌಚಾಲಯ ನಿರ್ಮಾಣ ಕಾಮಗಾರಿಯನ್ನು ಪ್ರಾಧಿಕಾರದಿಂದ ಅನುದಾನದಿಂದ ಕೈಗೊಳ್ಳಲು ಹಾಗೂ ಕಾಮಗಾರಿಯನ್ನು ನಿರ್ಮಿತಿ ಕೇಂದ್ರ, ತುಮಕೂರು ಇವರಿಗೆ ವಹಿಸಲು ಅನುಮೋದನೆಗಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ಈ ಶೌಚಾಲಯ ಕಾಮಗಾರಿಯ ಶೀಘ್ರವಾಗಿ ಪೂರ್ಣಗೊಳ್ಳಬೇಕಾಗಿರುವ ಕಾರಣ ಅಂದಾಜು ವೆಚ್ಚ ರೂ.2.45 ಲಕ್ಷಗಳ ಈ ಕಾಮಗಾರಿಯನ್ನು ತುಮಕೂರು ನಿರ್ಮಿತಿ ಕೇಂದ್ರಕ್ಕೆ ವಹಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 13** ತುಮಕೂರು ನಗರದ ಕುವೆಂಪು ನಗರ ಬಡಾವಣೆಯ ಕುವೆಂಪು ವೃತ್ತದ ಮುಂಭಾಗದಲ್ಲಿರುವ ಉದ್ಯಾನವನಕ್ಕೆ ಚೈನ್ ಲಿಂಕ್ ತಂತಿ ಬೇಲಿ ಅಳವಡಿಸುವ ಕಾಮಗಾರಿ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ನಗರದ ಕುವೆಂಪು ನಗರ ಬಡಾವಣೆಯ ಕುವೆಂಪು ವೃತ್ತದ ಮುಂಭಾಗದಲ್ಲಿರುವ ಉದ್ಯಾನವನಕ್ಕೆ ಚೈನ್ ಲಿಂಕ್ ತಂತಿ ಬೇಲಿ ನಿರ್ಮಾಣ ಮಾಡಲು ಉದ್ದೇಶಿಸಿದ್ದು, ಸದರಿ ಉದ್ಯಾನವನದ ಸ್ಥಳದಲ್ಲಿ ಸಾರ್ವಜನಿಕರು ಕಸ ಕಡ್ಡಿಯಿಂದ ಸ್ಥಳವನ್ನು ದುರುಪಯೋಗ

ಮಾಡುತ್ತಿರುವುದರಿಂದ ತೊಂದರೆಯಾಗುತ್ತಿರುವ ಬಗ್ಗೆ ಈ ಬಡಾವಣೆಯ ನಾಗರೀಕರು ಉದ್ಯಾನವನಕ್ಕೆ ಚೈನ್ ಲಿಂಕ್ ತಂತಿ ಬೇಲಿಯನ್ನು ಅಳವಡಿಸಲು ಮನವಿ ಮಾಡಿರುತ್ತಾರೆ. ಅದರಂತೆ ಸದರಿ ಉದ್ಯಾನವನಕ್ಕೆ ಚೈನ್ ಲಿಂಕ್ ತಂತಿ ಬೇಲಿಯನ್ನು ಅಳವಡಿಸುವ ಕಾಮಗಾರಿಯನ್ನು ತೆಗೆದುಕೊಳ್ಳಲು ಟೆಂಡರ್ ಕರೆಯಲು ಅನುಮೋದನೆಗಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ಕುವೆಂಪುನಗರ ವೃತ್ತದ ಮುಂಭಾಗ ಉದ್ಯಾನವನಕ್ಕೆ ಚೈನ್‌ಲಿಂಕ್ ಪೆನ್ಸಿಂಗ್ ಅಳವಡಿಸುವ ಕಾಮಗಾರಿಗೆ ಟೆಂಡರ್ ಕರೆಯಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 14** ತುಮಕೂರು ನಗರದ ಅಂತರಸನಹಳ್ಳಿ ಗ್ರಾಮದ ಶ್ರೀ ಲಕ್ಷ್ಮೀನರಸಿಂಹ ಬಡಾವಣೆಯ (ವಾರ್ಡ್ ನಂ.1) ಉದ್ಯಾನವನಕ್ಕೆ ಚೈನ್ ಲಿಂಕ್ ತಂತಿ ಬೇಲಿ ಅಳವಡಿಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ನಗರದ ಅಂತರಸನಹಳ್ಳಿ ಗ್ರಾಮದ ಶ್ರೀ ಲಕ್ಷ್ಮೀನರಸಿಂಹ ಬಡಾವಣೆಯ ಉದ್ಯಾನವನದ ಜಾಗವಿದ್ದು, ಸದರಿ ಪ್ರದೇಶದಲ್ಲಿ ಯಾವುದೇ ಉದ್ಯಾನವನವನ್ನು ಅಭಿವೃದ್ಧಿಪಡಿಸಿರುವುದಿಲ್ಲ. ಆದ್ದರಿಂದ ಅಲ್ಲಿನ ಸಾರ್ವಜನಿಕರಿಗೆ ಉದ್ಯಾನವನದ ಸೌಲಭ್ಯವಿಲ್ಲದಿರುವುದರಿಂದ, ಸದರಿ ಬಡಾವಣೆಯಲ್ಲಿ ಉದ್ಯಾನವನವನ್ನು ಅಭಿವೃದ್ಧಿಪಡಿಸಿಕೊಡಲು ಅಲ್ಲಿನ ನಾಗರೀಕರು ಮನವಿ ಮಾಡಿರುತ್ತಾರೆ. ಆದ್ದರಿಂದ ಬಡಾವಣೆಯಲ್ಲಿರುವ ಉದ್ಯಾನವನಕ್ಕೆ ಚೈನ್ ಲಿಂಕ್ ತಂತಿ ಬೇಲಿ ಅಳವಡಿಸಿ ಅಭಿವೃದ್ಧಿ ಪಡಿಸಲು ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಅಂದಾಜು ಮೊತ್ತವು ರೂ.18.10 ಲಕ್ಷಗಳಾಗಿರುತ್ತದೆ. ಆದ್ದರಿಂದ ಸದರಿ ಕಾಮಗಾರಿಯನ್ನು ಇ-ಟೆಂಡರ್ ಮುಖಾಂತರ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆಗಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ಅಂತರಸನಹಳ್ಳಿ ಗ್ರಾಮದ ಶ್ರೀ ಲಕ್ಷ್ಮೀನರಸಿಂಹ ಬಡಾವಣೆಯ ಉದ್ಯಾನವನಕ್ಕೆ ಚೈನ್‌ಲಿಂಕ್ ಪೆನ್ಸಿಂಗ್ ಅಳವಡಿಸುವ ಕಾಮಗಾರಿಗೆ ಟೆಂಡರ್ ಕರೆಯಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 15** ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿಗೆ Fujitsu ಸ್ಕ್ಯಾನರ್‌ನ್ನು ಖರೀದಿಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಆಡಳಿತ ವ್ಯವಸ್ಥೆಯನ್ನು ಗಣಕೀಕರಣಗೊಳಿಸಲು ಕ್ರಮಕೈಗೊಂಡಿದ್ದು ಪೂರ್ಣಗೊಳ್ಳುವ

ಹಂತದಲ್ಲಿದೆ. ಗಣಕೀಕರಣಕ್ಕೆ ಅಗತ್ಯ ಮತ್ತು ಲೆಸ್‌ಪೇಪರ್ ಕಾರ್ಯವಿಧಾನಕ್ಕೆ ಪೂರಕವಾಗಿ ಸಾಫ್ಟ್‌ವೇರ್‌ನ್ನು ಈಗಾಗಲೇ ಅಳವಡಿಸಲಾಗಿದ್ದು, ಪ್ರಾಯೋಗಿಕವಾಗಿ ಪರಿಶೀಲನೆ ನಡೆಸಲಾಗುತ್ತಿದೆ. ಉದ್ದೇಶಿತ ಲೆಸ್‌ಪೇಪರ್ ಆಫೀಸ್ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಹಿಂದಿನ ಕಡತಗಳನ್ನು ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಸಿ.ಡಿ. ಅಥವಾ ಹಾರ್ಡ್‌ಡಿಸ್ಕ್‌ನಲ್ಲಿ ಸಂರಕ್ಷಿಸುವುದು ಅವಶ್ಯವಾಗಿರುತ್ತದೆ. ಆದ್ದರಿಂದ Fujitsu ಸ್ಕ್ಯಾನರ್ ಖರೀದಿಸುವುದು ಅವಶ್ಯಕತೆವಾಗಿರುತ್ತದೆ. ಈ ಸ್ಕ್ಯಾನರ್ ಮೊತ್ತವು ಸುಮಾರು ರೂ.75,000 ಗಳಾಗಬಹುದಾಗಿದ್ದು, ಅನುಮೋದನೆಗಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ**

ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ಪ್ರಾಧಿಕಾರದ ಪ್ರಿಂಟರ್ ಹಳೆಯದಾಗಿದ್ದು, ಈಗಾಗಲೇ ನಿಗಧಿತ ಹೆಚ್ಚಿನ ಸಂಖ್ಯೆಯ ಪ್ರತಿಗಳನ್ನು ತೆಗೆದಿರುವ ಕಾರಣ Fujitsu ಸ್ಕ್ಯಾನರ್ ಖರೀದಿಸಲು ನಿಯಮಗಳಂತೆ ಕ್ರಮಕೈಗೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 16**

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ Touch Screen Kiosk Machine ಖರೀದಿಸುವ ಬಗ್ಗೆ.

**ಟಿಪ್ಪಣಿ**

ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಆಡಳಿತ ವ್ಯವಹಾರವನ್ನು ಗಣಕೀಕರಣಗೊಳಿಸಲಾಗುತ್ತಿದ್ದು, ಸಾರ್ವಜನಿಕರಿಗೆ ಮಾಹಿತಿ ನೀಡಲು ಅನುವಾಗುವಂತೆ ಮತ್ತು ಅವರ ಪತ್ರ ವ್ಯವಹಾರ ಕೆಲಸಗಳು ಮತ್ತು ಕಡತಗಳ ಚಲನೆಯ ಸಂಬಂಧ ಸಾರ್ವಜನಿಕರಿಗೆ ಮಾಹಿತಿ ನೀಡಲು ಅನುಕೂಲವಾಗುವಂತೆ ಸುಮಾರು ರೂ.80,000 ಗಳ ವೆಚ್ಚದಲ್ಲಿ Touch Screen Kiosk Machine ನ್ನು ಕೋಟೇಷನ್ ಮುಖಾಂತರ ಖರೀದಿಸಬೇಕಾಗಿದ್ದು, ಅನುಮೋದನೆಗಾಗಿ ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ**

ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ಸಾರ್ವಜನಿಕರಿಗೆ ಮಾಹಿತಿ ನೀಡುವಂತೆ ಸರ್ಕಾರವು ನಿರ್ದೇಶಿಸಿರುವುದರಿಂದ ಸದರಿ ಸೌಲಭ್ಯ ನೀಡಲು ಕ್ರಮವಹಿಸಬೇಕಾಗಿರುತ್ತದೆ. ಅದರಂತೆ ನಿಯಮಾನುಸಾರ ಸದರಿ Touch Screen Kiosk Machine ಅಳವಡಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 17**

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿಯ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ಆಟೋಮೇಷನ್ ತಾಂತ್ರಿಕತೆಯನ್ನು ಕಛೇರಿಯ ಸಿಬ್ಬಂದಿಗಳಿಗೆ ತರಬೇತಿ ನೀಡುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿಯನ್ನು ಗಣಕೀಕರಣಗೊಳಿಸುವುದಕ್ಕಾಗಿ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ಟೆಕ್ನಾಲಜಿಯನ್ನು ಪ್ರಾಧಿಕಾರದ ಕಛೇರಿಯ ವ್ಯವಹಾರಕ್ಕಾಗಿ ಅಳವಡಿಸಲಾಗಿದ್ದು, ಮೆ॥ ಡಿಬಿಕ್ಯೂ ಟೆಕ್ನಾಲಜಿಸ್ ಪ್ರೈ.ಲಿಮಿಟೆಡ್, ಬೆಂಗಳೂರು ಇವರ ಮುಖಾಂತರ ಅಳವಡಿಸಲಾಗಿರುತ್ತದೆ. ಸದರಿ ಸಾಫ್ಟವೇರ್ ಟೆಕ್ನಾಲಜಿಯ ಕಾರ್ಯನಿರ್ವಹಣೆಯ ಬಗ್ಗೆ ಪ್ರಾಧಿಕಾರದ ಕಛೇರಿಯ ಸಿಬ್ಬಂದಿಗಳಿಗೆ ತರಬೇತಿ ನೀಡುವುದು ಸೇರಿದಂತೆ ಟೆಂಡರ್‌ನಲ್ಲಿ ಅನುಸರಿಸಲಾಗಿದ್ದು, ಅದರಂತೆ ಸದರಿ ಸಂಸ್ಥೆಯವರು ಕಛೇರಿಯ ಸಿಬ್ಬಂದಿಗೆ ತರಬೇತಿ ನೀಡಲು ಒಬ್ಬ ಪ್ರತಿನಿಧಿಯನ್ನು ನಿಯೋಜಿಸಿರುತ್ತಾರೆ. ಆದರೆ ಏಕಮಾತ್ರ ಪ್ರತಿನಿಧಿಯಿಂದ ಪೂರ್ಣ ಸಿಬ್ಬಂದಿಗೆ ತರಬೇತಿ ನೀಡುವುದು ನಿಧಾನವಾಗುತ್ತಿದ್ದು, ನಿರೀಕ್ಷಿತ ಮಟ್ಟದಲ್ಲಿ ತರಬೇತಿಯ ಪ್ರಗತಿಯಾಗುತ್ತಿಲ್ಲ. ಆದ್ದರಿಂದ ಪ್ರಾಧಿಕಾರದ ಕಛೇರಿಯ ಎಲ್ಲಾ ಸಿಬ್ಬಂದಿಗಳಿಗೆ ಒಂದು ವಾರದ ಮಟ್ಟಿಗೆ ಪ್ರತ್ಯೇಕವಾಗಿ ಪರಿಣಿತ ಸಿಬ್ಬಂದಿಯಿಂದ ತರಬೇತಿ ನೀಡಿದಲ್ಲಿ ನಿರೀಕ್ಷಿತ ಮಟ್ಟಿಗೆ ಪ್ರಗತಿ ಕಾಣಬಹುದಾಗಿದ್ದು, ಸದರಿ ತರಬೇತಿಗೆ ರೂ.25,000/-ಗಳಷ್ಟು ಮೊತ್ತವನ್ನು ಪ್ರಾಧಿಕಾರದಿಂದ ಹೆಚ್ಚುವರಿಯಾಗಿ ಪಾವತಿಸಿದ್ದಲ್ಲಿ ತರಬೇತಿಯನ್ನು ಕೈಗೊಳ್ಳುವುದಾಗಿ ಸದರಿ ಸಂಸ್ಥೆಯವರು ತಿಳಿಸಿರುತ್ತಾರೆ. ಆದ್ದರಿಂದ ಕಛೇರಿ ಸಿಬ್ಬಂದಿಗೆ ತರಬೇತಿಯನ್ನು ನೀಡಲು ರೂ.25,000/- ಗಳನ್ನು ಹೆಚ್ಚುವರಿಯಾಗಿ ಮೆ॥ ಡಿಬಿಕ್ಯೂ ಟೆಕ್ನಾಲಜಿಸ್ ಪ್ರೈ.ಲಿಮಿಟೆಡ್, ಬೆಂಗಳೂರು ರವರಿಗೆ ಪಾವತಿಸುವ ಬಗ್ಗೆ ತೀರ್ಮಾನಕ್ಕಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಸಿಬ್ಬಂದಿ ವರ್ಗದವರಿಗೆ ತರಬೇತಿಯನ್ನು ನೀಡಲು ರೂ.25,000/- ಗಳನ್ನು ಹೆಚ್ಚುವರಿಯಾಗಿ ಮೆ॥ ಡಿಬಿಕ್ಯೂ ಟೆಕ್ನಾಲಜಿಸ್ ಪ್ರೈ.ಲಿಮಿಟೆಡ್, ಬೆಂಗಳೂರು ರವರಿಗೆ ಪಾವತಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 18** ತುಮಕೂರು ನಗರದ ಗೋಕುಲ ಬಡಾವಣೆಯ 2ನೇ ಹಂತದ ಅಭಿವೃದ್ಧಿ ಪಡಿಸಲಾದ ಉದ್ಯಾನವನಕ್ಕೆ ಇಂಟರ್ ಲಾಕ್ ಟೈಲ್ಸ್ ಮತ್ತು ಸೋಲಾರ್ ಲೈಟ್‌ಗಳನ್ನು ಅಳವಡಿಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಗೋಕುಲ ಬಡಾವಣೆಯ 2ನೇ ಹಂತದ ಬಡಾವಣೆಯಲ್ಲಿರುವ ಉದ್ಯಾನವನಕ್ಕೆ ಚೈನ್ ಲಿಂಕ್ ತಂತಿ ಬೇಲಿ ಅಳವಡಿಸಿ ಲ್ಯಾಂಡ್ ಸ್ಕೇಪ್ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. ಸದರಿ ಉದ್ಯಾನವನದ ವಾಕ್ ಪಾತ್‌ಗೆ ಇಂಟರ್ ಲಾಕ್ ಟೈಲ್ಸ್ ಅಳವಡಿಸುವ ಕಾಮಗಾರಿ ಬಾಕಿಯಿದ್ದು, ಉದ್ಯಾನವನಕ್ಕೆ ವಿದ್ಯುತ್ ದೀಪಗಳನ್ನು ಅಳವಡಿಸಬೇಕಾಗಿರುತ್ತದೆ. ಆದುದರಿಂದ ಸದರಿ ಉದ್ಯಾನವನಕ್ಕೆ

ಇಂಟರ್ ಲಾಕ್ ಟೈಲ್ಸ್ ಮತ್ತು ಸೋಲಾರ್ ಲೈಟ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ಟೆಂಡರ್ ಮುಖಾಂತರ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆಗಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ಸದರಿ ಉದ್ಯಾನವನಕ್ಕೆ ಈಗಾಗಲೇ ಚೈನ್‌ಲಿಂಕ್ ಪೆನ್ಸಿಂಗ್ ಅಳವಡಿಸಿ ಲ್ಯಾಂಡ್ ಸ್ಕೇಪ್ ಅಭಿವೃದ್ಧಿ ಕಾಮಗಾರಿ ಕೈಗೊಂಡಿರುವುದರಿಂದ ಸದರಿ ಉದ್ಯಾನವನಕ್ಕೆ ಇಂಟರ್‌ಲಾಕ್ ಟೈಲ್ಸ್ ಮತ್ತು ಸೋಲಾರ್ ಲೈಟ್‌ಗಳನ್ನು ಅಳವಡಿಸಲು ಟೆಂಡರ್ ಕರೆಯಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 19** ತುಮಕೂರು ಅಮಾನಿಕೆರೆಯ ಬೆಂಗಳೂರು ರಸ್ತೆಗೆ ಹೊಂದಿಕೊಂಡಂತೆ ಸರ: 250.00 ಮೀಟರ್‌ನಲ್ಲಿ ಬೆಂಗಳೂರು ರಸ್ತೆ ಬಂಡ್‌ಗೆ ಅಡ್ಡವಾಗಿ ಆರ್.ಸಿ.ಸಿ. ಡೆಕ್‌ಸ್ಲ್ಯಾಬ್ ಮತ್ತು ಇಂಟರ್‌ಸೆಪ್ಟ್ ಚರಂಡಿಯಿಂದ ಕೋತಿತೋಪು ಭಾಗದಲ್ಲಿ ಕಾಲುವೆ ನಿರ್ಮಾಣ ಮಾಡುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ಅಮಾನಿಕೆರೆಯಲ್ಲಿ ಮುಖ್ಯ ಮಳೆ ನೀರಿನ ಚರಂಡಿಯಿಂದ ಕೆರೆಗೆ ಮಳೆ ನೀರು ಹರಿಯುವಂತೆ ಮಾಡಲು ಮಳೆ ನೀರು ಚರಂಡಿಯ ಸರ: 250.00 ಮೀಟರ್‌ನಲ್ಲಿ ಚರಂಡಿಯ ಒಳಭಾಗದ ಗೋಡೆಯ ಎತ್ತರವನ್ನು ತಗ್ಗಿಸಲಾಗಿದ್ದು, ಬೆಂಗಳೂರು ರಸ್ತೆಗೆ ಅಡ್ಡವಾಗಿ ಆರ್.ಸಿ.ಸಿ. ಗೋಡೆಗಳನ್ನು ನಿರ್ಮಿಸಿ ಡೆಕ್‌ಸ್ಲ್ಯಾಬ್ ನಿರ್ಮಾಣ ಮಾಡಬೇಕಾಗಿರುತ್ತದೆ. ಬೆಂಗಳೂರು ರಸ್ತೆ ಬಂಡ್ ಭಾಗದಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯ ಉದ್ಯಾನವನದಿಂದ ಕೋತಿತೋಪು ಉದ್ಯಾನವನದವರೆಗೆ ವಾಕ್‌ಪಾತ್ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದ್ದು, ಬೆಂಗಳೂರು ರಸ್ತೆ ಬಂಡ್ ಅಡ್ಡಕ್ಕೆ ಆರ್.ಸಿ.ಸಿ. ಡೆಕ್‌ಸ್ಲ್ಯಾಬ್ ನಿರ್ಮಾಣ ತುರ್ತಾಗಿ ಮಾಡಬೇಕಾಗಿರುತ್ತದೆ. ಆದ್ದರಿಂದ, ವಾಕ್ ಪಾತ್ ಕಾಮಗಾರಿಯನ್ನು ಪೂರ್ಣಗೊಳಿಸಲು ತುರ್ತಾಗಿ ಆರ್.ಸಿ.ಸಿ. ಡೆಕ್‌ಸ್ಲ್ಯಾಬ್ ಮತ್ತು ಇಂಟರ್‌ಸೆಪ್ಟ್ ಚರಂಡಿಯಿಂದ ಕೋತಿತೋಪು ಭಾಗದಲ್ಲಿ ಕಾಲುವೆ ನಿರ್ಮಾಣ ಮಾಡಲು ಅಂದಾಜು ಪಟ್ಟಿಯನ್ನು ರೂ.9.90 ಲಕ್ಷಗಳಿಗೆ ತಯಾರಿಸಲಾಗಿದ್ದು, ಸದರಿ ಕಾಮಗಾರಿಯನ್ನು ಟೆಂಡರ್ ಮುಖಾಂತರ ಕೈಗೊಳ್ಳಲು ಅನುಮೋದನೆಗಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ತುಮಕೂರು ಅಮಾನಿಕೆರೆಯಲ್ಲಿ ಆರ್.ಸಿ.ಸಿ. ಡೆಕ್‌ಸ್ಲ್ಯಾಬ್ ಮತ್ತು ಇಂಟರ್‌ಸೆಪ್ಟ್ ಚರಂಡಿಯಿಂದ ಕೋತಿತೋಪು ಭಾಗದಲ್ಲಿ ಕಾಲುವೆ ನಿರ್ಮಾಣ ಮಾಡುವ ಸಂಬಂಧ ಟೆಂಡರ್ ಕರೆಯಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 20** ತುಮಕೂರು ನಗರದ ಹೊನ್ನೇನಹಳ್ಳಿ ಗ್ರಾಮದ ಸರ್ವೆ ನಂಬರ್ 69/9 ರಲ್ಲಿ ವಿಸ್ತೀರ್ಣ 0–35 ಗುಂಟೆ ಪ್ರದೇಶದಲ್ಲಿ ಉಳಿಕೆ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ತುಮಕೂರು ನಗರದ ಹೊನ್ನೇನಹಳ್ಳಿ ಗ್ರಾಮದ ಸರ್ವೆ ನಂಬರ್ 69/9 ರಲ್ಲಿ ವಿಸ್ತೀರ್ಣ 0–35 ಗುಂಟೆ ಜಮೀನಿಗೆ ಪ್ರಾಧಿಕಾರದ ದಿನಾಂಕ 19–07–2011 ರ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ 68 ರ ನಿರ್ಣಯದನ್ವಯ ಸದರಿ ಜಮೀನಿಗೆ ವಿನ್ಯಾಸ ಅನುಮೋದನೆ ನೀಡಿ ಈ ಕಛೇರಿಯ ವಿನ್ಯಾಸ ಅನುಮೋದನೆ ಸಂಖ್ಯೆ ತುನಪ್ರಾ/ನಯೋ/ವಿನ್ಯಾಸ/121/2011–12 ದಿನಾಂಕ 28–10–2011 ರನ್ವಯ ಶೇಕಡ 60 ರಷ್ಟು ನಿವೇಶನಗಳನ್ನು ಅರ್ಜಿದಾರರಾದ ಶ್ರೀಮತಿ ಕೆ.ಎ.ಸರೋಜ ಎಂಬುವವರ ಹೆಸರಿಗೆ ಬಿಡುಗಡೆ ಮಾಡಲಾಗಿದ್ದು, ಅರ್ಜಿದಾರರು ನಿರ್ವಹಿಸಬೇಕಾದ ಅಗತ್ಯ ಕಾಮಗಾರಿಗಳನ್ನು ನಿರ್ವಹಿಸಲು ಈ ಕಛೇರಿಯ ಕಾರ್ಯಾದೇಶ ಸಂಖ್ಯೆ ತುನಪ್ರಾ/ಸಕಾಇ/ಎಲ್ಎಒ/121/2011–02 ದಿನಾಂಕ 08–02–2012 ರಂದು ಕಾರ್ಯಾದೇಶ ನೀಡಲಾಗಿದ್ದು. ಡಾಂಬರೀಕರಿಸಿದ ರಸ್ತೆ, ಕಲ್ಲು ಚಪ್ಪಡಿ ಚರಂಡಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ವಿದ್ಯುತ್ ಕಾಮಗಾರಿ ಕೆಲಸವನ್ನು ಪೂರ್ಣಗೊಳಿಸಿದ್ದು, ಉಳಿಕೆ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬಹುದೆಂದು ಈ ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು ವರದಿ ನೀಡಿದ್ದು, ಸದರಿ ವರದಿಯನ್ವಯ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ ಸೂಕ್ತ ಚರ್ಚೆ ಹಾಗೂ ನಿರ್ಣಯಕ್ಕಾಗಿ ಪ್ರಾಧಿಕಾರದ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :** ಪ್ರಸ್ತಾವಿತ ಪ್ರದೇಶದ ಸ್ಥಳ ಪರಿಶೀಲನೆ ಮಾಡಲಾಯಿತು ಹಾಗೂ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ಅಂತಿಮ ಅನುಮೋದನೆಗೆ ಸಿದ್ದಪಡಿಸಿರುವ ವಿನ್ಯಾಸದಂತೆ ನಿವೇಶನಗಳನ್ನು ರಚಿಸಲಾಗಿರುತ್ತದೆ. ಆದ್ದರಿಂದ ಉಳಿಕೆ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬಹುದು.

**ತೀರ್ಮಾನ** ಸದರಿ ವಿಷಯವನ್ನು ಮತ್ತು ನಗರ ಯೋಜನಾ ಸದಸ್ಯರ ಅಭಿಪ್ರಾಯವನ್ನು ಪರಿಗಣಿಸಲಾಯಿತು. ತುಮಕೂರು ನಗರದ ಹೊನ್ನೇನಹಳ್ಳಿ ಗ್ರಾಮದ ಸರ್ವೆ ನಂಬರ್ 69/9 ರಲ್ಲಿ ವಿಸ್ತೀರ್ಣ 0–35 ಗುಂಟೆ ಜಮೀನಿನ ಅನುಮೋದಿತ ಬಡಾವಣೆಯಲ್ಲಿನ ಉಳಿಕೆ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ಸಂಖ್ಯೆ 21** ತುಮಕೂರು ನಗರದ ಕ್ಯಾತ್ಸಂದ್ರ ಗ್ರಾಮದ ಸರ್ವೆ ನಂಬರ್ 15/3 ರಲ್ಲಿ ಒಟ್ಟು ವಿಸ್ತೀರ್ಣ 0–12.04 ಗುಂಟೆ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ಮಾರ್ಪಾಡು ವಿನ್ಯಾಸ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಶ್ರೀ ಕೆ.ಎನ್.ಗುಂಡುರಾವ್ ಎಂಬುವವರು ತುಮಕೂರು ನಗರದ, ಕ್ಯಾತ್ಸಂದ್ರ ಗ್ರಾಮದ ಸರ್ವೆ ನಂಬರ್ 15/3 ರಲ್ಲಿ ಒಟ್ಟು ವಿಸ್ತೀರ್ಣ 0-12.04 ಗುಂಟೆ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ಮಾರ್ಪಾಡು ವಿನ್ಯಾಸ ಅನುಮೋದನೆ ನೀಡಲು ಕೋರಿರುತ್ತಾರೆ. ಸದರಿ ವಿನ್ಯಾಸಕ್ಕೆ ಹೊಂದಿಕೊಂಡಂತೆ ಇದೇ ಸರ್ವೆ ನಂಬರ್ 15/3 ರಲ್ಲಿ 1 ಎಕರೆ 02 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ನಗರ ಯೋಜನಾ ಪ್ರಾಧಿಕಾರದಿಂದ ಟಿಟಿಪಿಎ/ಟಿಪಿಎಸ್-2/ಎಫ್-805/ಎಲ್ಎಒ/204/84-85 ದಿನಾಂಕ 11-03-2011 ರಲ್ಲಿ ಲೇಔಟ್ ಮಂಜೂರಾತಿಯಾಗಿರುತ್ತದೆ. ಅರ್ಜಿದಾರರು ಸದರಿ ಬಡಾವಣೆಯಲ್ಲಿರುವ ಉದ್ಯಾನವನ ಜಾಗವನ್ನು ರಸ್ತೆಗೆ ಸ್ಥಳಾಂತರಿಸಿ, ರಸ್ತೆಯ ಜಾಗವನ್ನು ಉದ್ಯಾನವನಕ್ಕೆ ಅಳವಡಿಸಿಕೊಂಡು ತಮಗೆ ದಿನಾಂಕ 30-04-2010 ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ 02 ರ ನಿರ್ಣಯದಂತೆ ಅನುಮೋದಿಸಿರುವ ವಿನ್ಯಾಸವನ್ನು ಮಾರ್ಪಾಡಿಸಿಕೊಡುವಂತೆ ಕೋರಿರುತ್ತಾರೆ. ಆದುದರಿಂದ ವಿಷಯವನ್ನು ಸೂಕ್ತ ಚರ್ಚೆ ಹಾಗೂ ನಿರ್ಣಯಕ್ಕಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :** ಈ ಹಿಂದೆ ನಗರ ಯೋಜನಾ ಪ್ರಾಧಿಕಾರದಿಂದ ಅನುಮೋದಿಸಲ್ಪಟ್ಟಿರುವ 1 ಎಕರೆ 02 ಗುಂಟೆ ವಿಸ್ತೀರ್ಣದ ವಿನ್ಯಾಸದಲ್ಲಿ ಇರುವ ಉದ್ಯಾನವನ ಹಾಗೂ ರಸ್ತೆಗಳನ್ನು ದಾನಪತ್ರ ಮಾಡಿಕೊಟ್ಟಿದ್ದಲ್ಲಿ ಇವುಗಳನ್ನು ರದ್ದುಗೊಳಿಸಿ, ಅರ್ಜಿದಾರರು ಕೋರಿರುವ ವಸತಿ ಉದ್ದೇಶದ ವಿಭಜಿತ ವಿನ್ಯಾಸದ ಮಾರ್ಪಾಡು ನಕ್ಷೆಯನ್ನು ಅನುಮೋದಿಸಬಹುದಾಗಿರುತ್ತದೆ.

**ತೀರ್ಮಾನ** ಸದರಿ ವಿಷಯವನ್ನು ಮತ್ತು ನಗರ ಯೋಜನಾ ಸದಸ್ಯರ ಅಭಿಪ್ರಾಯವನ್ನು ಪರಿಗಣಿಸಲಾಯಿತು. ಅರ್ಜಿದಾರರ ಮನವಿಯಂತೆ, ಆ ಭಾಗದ ಜನರ ಕೋರಿಕೆಯಂತೆ ಉದ್ಯಾನವನದ ಮಧ್ಯ ಭಾಗದ ರಸ್ತೆಯನ್ನು ಒಂದು ಭಾಗಕ್ಕೆ ಸ್ಥಳಾಂತರಿಸಿ ಪರಿಷ್ಕರಿಸಿ ವಿನ್ಯಾಸ ಅನುಮೋದನೆ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 22** ತುಮಕೂರು ತುಮಕೂರು ಅಮಾನಿಕೆರೆ ಮುಂಭಾಗದ ಬೆಂಗಳೂರು ರಸ್ತೆಯ ಪಕ್ಕದಲ್ಲಿ ಹಾಕಲಾಗಿರುವ ಗಿಡಗಳನ್ನು ಒಳಭಾಗಕ್ಕೆ ಸ್ಥಳಾಂತರಿಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ಅಮಾನಿಕೆರೆ ಮುಂಭಾಗದ ಬೆಂಗಳೂರು ರಸ್ತೆಯ ಪಕ್ಕದಲ್ಲಿ ಗಿಡಗಳನ್ನು ಹಾಕಲಾಗಿದ್ದು, ಗಿಡಗಳನ್ನು ಹಾಕಿದ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆಯು ರಸ್ತೆಯನ್ನು ಅಗಲೀಕರಣ ಮಾಡುವುದು ಮತ್ತು ಮಳೆನೀರಿನ ಚರಂಡಿ ನಿರ್ಮಿಸುವ ಬಗ್ಗೆ ಮಾಹಿತಿ ಲಭ್ಯವಿರಲಿಲ್ಲ. ಪ್ರಸ್ತುತ ಲೋಕೋಪಯೋಗಿ ಇಲಾಖೆಯು ರಸ್ತೆಯನ್ನು ಅಗಲೀಕರಣ ಮಾಡುವುದರೊಂದಿಗೆ ಮಳೆ ನೀರಿನ ಚರಂಡಿ ನಿರ್ಮಿಸಲು ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದು, ಇದರಿಂದ ಹಾಕಲಾಗಿರುವ ಗಿಡಗಳಿಗೆ ತೊಂದರೆ ಆಗಬಹುದಾಗಿದ್ದು,

ಅಧ್ಯಕ್ಷರ ಸೂಚನೆ ಮತ್ತು ದಿನಾಂಕ 30–04–2012 ರಂದು ನಡೆದ ಪತ್ರಿಕಾ ಗೋಷ್ಠಿಯಲ್ಲಿ ಸೂಚಿಸಿರುವಂತೆ ಸದರಿ ಗಿಡಗಳನ್ನು ಅಮಾನಿಕೆರೆ ಪಾರ್ಕಿನ ಚೈನ್ ಲಿಂಕ್ ಫೆನ್ಸಿಂಗ್ ಒಳಭಾಗಕ್ಕೆ ಸ್ಥಳಾಂತರಿಸಬೇಕಾಗಿದ್ದು ವಿಷಯವನ್ನು ಚರ್ಚೆ ಮತ್ತು ತೀರ್ಮಾನಕ್ಕಾಗಿ ಮಂಡಿಸಿದೆ.

**ತೀರ್ಮಾನ**

ವಿಷಯವನ್ನು ಚರ್ಚಿಸಲಾಯಿತು. ಈ ಹಿಂದೆ ರಸ್ತೆ ನಿರ್ಮಿಸಿದ ಸಂದರ್ಭದಲ್ಲಿ ನಗರ ಸಭೆ ವತಿಯಿಂದ ರಸ್ತೆ ಪಕ್ಕದಲ್ಲಿದ್ದ ಗಿಡಗಳನ್ನು ತೆಗೆಯಲಾಗಿರುತ್ತದೆ. ಪ್ರಸ್ತುತ ಲೋಕೋಪಯೋಗಿ ಇಲಾಖೆಯು ಈ ರಸ್ತೆಯನ್ನು ಸುಮಾರು 1.5 ಮೀಟರ್ ನಿಂದ 2 ಮೀಟರ್‌ವರೆಗೆ ಅಗಲೀಕರಣಗೊಳಿಸಿ ಮಳೆ ನೀರಿನ ಚರಂಡಿ ನಿರ್ಮಿಸಲು ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಿರುತ್ತದೆ. ಈ ಕಾಮಗಾರಿಯ ಸಂದರ್ಭದಲ್ಲಿ ಗಿಡಗಳಿಗೆ ತೊಂದರೆ ಉಂಟಾಗಬಹುದಾಗಿರುತ್ತದೆ. ಅಮಾನಿಕೆರೆಯನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಿದ ನಂತರ ಈ ರಸ್ತೆಯನ್ನು ಸಹ ವಿಸ್ತರಿಸಬೇಕಾದ ಅನಿವಾರ್ಯತೆಯಾಗಿರುತ್ತದೆ. ಕೆರೆ ಅಭಿವೃದ್ಧಿಗೊಂಡ ನಂತರ ವಾಹನಗಳನ್ನು ಪಾರ್ಕ್ ಮಾಡಲು ಸ್ಥಳಾವಕಾಶದ ಅಗತ್ಯವಿರುತ್ತದೆ. ಈ ಕಾರಣಗಳಿಂದಾಗಿ ಪ್ರಸ್ತುತ ಹಾಕಲಾಗಿರುವ ಗಿಡಗಳನ್ನು ತಂತಿ ಬೇಲಿಯ ಒಳಭಾಗಕ್ಕೆ ಸ್ಥಳಾಂತರಿಸಲು ತೀರ್ಮಾನಿಸಲಾಯಿತು.

ಸಹಿ/–
ಅಧ್ಯಕ್ಷರು
ನಗರಾಭಿವೃದ್ಧಿ ಪ್ರಾಧಿಕಾರ
ತುಮಕೂರು.

– ನಕಲು –

ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ
ತುಮಕೂರು.

ಸಂಖ್ಯೆ ಟಿಯುಡಿಎ / ಸಭೆ / 01 / 2012-13

## ದಿನಾಂಕ 02-05-2012 ರಂದು ಪ್ರಾಧಿಕಾರದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಹಾಜರಾತಿ ವಹಿ

* * * *

**ಹಾಜರಿದ್ದ ಸದಸ್ಯರು**

| | | |
|---|---|---|
| **01.** | **ಮಾನ್ಯಶ್ರೀ ಎಸ್.ಆರ್.ಶ್ರೀಧರಮೂರ್ತಿ ರವರು**<br>ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು. | ಅಧ್ಯಕ್ಷರು |
| **02.** | **ಶ್ರೀ ಶಾಂತರಾಜು ರವರು**<br>ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು. | ಸದಸ್ಯರು |
| **03.** | **ಶ್ರೀ ಪಿ.ರವಿಶಂಕರ್ ರವರು**<br>ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು. | ಸದಸ್ಯರು |
| **04.** | **ಶ್ರೀಮತಿ ಲೀಲಾವತಿ ರವರು**<br>ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು. | ಸದಸ್ಯರು |
| **05.** | **ಶ್ರೀ ರವಿ ರವರು**<br>ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು. | ಸದಸ್ಯರು |
| **06.** | **ಆಯುಕ್ತರು**<br>ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು. | ಪದನಿಮಿತ್ತ ಸದಸ್ಯರು |
| **07.** | **ನಗರ ಯೋಜನಾ ಜಂಟಿ ನಿರ್ದೇಶಕರು**<br>ಹಾಗೂ ನಗರ ಯೋಜನಾ ಸದಸ್ಯರು,<br>ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು. | ಸದಸ್ಯರು |
| **08.** | **ಕಾರ್ಯಪಾಲಕ ಅಭಿಯಂತರರು**<br>ಬೆಸ್ಕಾಂ, ತುಮಕೂರು. | ಸದಸ್ಯರು |
| **09.** | **ಕಾರ್ಯನಿರ್ವಾಹಕ ಅಭಿಯಂತರರು**<br>ಲೋಕೋಪಯೋಗಿ ಇಲಾಖೆ, ತುಮಕೂರು. | ಸದಸ್ಯರು |
| **10.** | **ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು**<br>ತುಮಕೂರು ಜಿಲ್ಲೆ, ತುಮಕೂರು. | ಸದಸ್ಯರು |

**ಗೈರುಹಾಜರಿದ್ದ ಸದಸ್ಯರು**

| | | |
|---|---|---|
| **11.** | **ಮಾನ್ಯ ಶ್ರೀ ಎಸ್.ಶಿವಣ್ಣರವರು**<br>ತುಮಕೂರು ನಗರ ವಿಧಾನ ಸಭಾ ಸದಸ್ಯರು, ತುಮಕೂರು | ಸದಸ್ಯರು |
| **12.** | **ಮಾನ್ಯ ಶ್ರೀ ಬಿ.ಸುರೇಶಗೌಡರವರು**<br>ಸದಸ್ಯರು, ತುಮಕೂರು ಗ್ರಾಮೀಣ ವಿಧಾನ ಸಭಾ ಸದಸ್ಯರು,<br>ತುಮಕೂರು. | ಸದಸ್ಯರು |
| **13.** | **ಡಾ॥ ಎಂ.ಆರ್.ಹುಲಿನಾಯ್ಕರ್ ರವರು**<br>ವಿಧಾನ ಪರಿಷತ್ ಸದಸ್ಯರು, ತುಮಕೂರು. | ಸದಸ್ಯರು |
| **14.** | **ಜಿಲ್ಲಾಧಿಕಾರಿಗಳು**<br>ತುಮಕೂರು ಜಿಲ್ಲೆ, ತುಮಕೂರು. | ಪದನಿಮಿತ್ತ ಸದಸ್ಯರು |
| **15.** | **ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್**<br>ಸದಸ್ಯರು, ತುಮಕೂರು. | ಸದಸ್ಯರು |
| **16.** | **ಶ್ರೀ ಜಿ.ಕೆ.ಶ್ರೀನಿವಾಸ್ ರವರು**<br>ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು. | ಸದಸ್ಯರು |
| **17.** | **ಪೌರಾಯುಕ್ತರು**<br>ನಗರಸಭೆ, ತುಮಕೂರು. | ಪದನಿಮಿತ್ತ ಸದಸ್ಯರು |
| **18.** | **ಸಹಾಯಕ ಕಾರ್ಯಪಾಲಕ ಅಭಿಯಂತರರು**<br>ಕ.ನ.ನೀ.ಸ ಮತ್ತು ಒ.ಚ.ಮಂಡಳಿ, ತುಮಕೂರು. | ಸದಸ್ಯರು |